# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಫೆಬ್ರವರಿ 08, 2021

ಸಂಪುಟ : 47 ಸಂಚಿಕೆ : 280 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಉತ್ತರಾಖಂಡಕ್ಕೆ ಹಿಮಪಾತದ ಆಘಾತ

### ಏಳು ಸಾವು, 125 ಜನ ಕಣ್ಮರೆ; ವಿದ್ಯುತ್ ಘಟಕಗಳಿಗೆ ಹಾನಿ

ನವದೆಹಲಿ/ಡೆಹರಾಡೂನ್ ಫೆ. 7 - ಉತ್ತರಾಖಂಡದ ಚಮೋಲಿಯಲ್ಲಿ ಹಿಮಪಾತ ಸಂಭವಿಸಿ ಅಲಕಾನಂದ ನದಿ ಜಾಲದಲ್ಲಿ ತೀವ್ರ ಪ್ರವಾಹ ಉಂಟಾಗಿದೆ. ಇದರಿಂದಾಗಿ ಜಲ ವಿದ್ಯುತ್ ಘಟಕಗಳು ಕೊಚ್ಚಿ ಹೋಗಿದ್ದು, ನೂರಕ್ಕೂ ಹೆಚ್ಚು ಜನರು ಅವಶೇಷಗಳಡಿ ಸಿಲುಕಿ ಸಾವನ್ನಪ್ಪಿರುವ ಕಳವಳ ಉಂಟಾಗಿದೆ.

ನಂದಾದೇವಿ ಹಿಮನದಿಯ ಭಾರೀ ಪ್ರಮಾಣದ ಹಿಮ ಕುಸಿತವಾಗಿ ಧೌಲಿ ಗಂಗಾ, ಋಷಿ ಗಂಗಾ ಹಾಗೂ ಅಲಕಾನಂದ ನದಿಗಳಲ್ಲಿ ಕ್ಷಿಪ್ರ ಪ್ರವಾಹ ಉಂಟಾಗಿದೆ. ಈ ಎಲ್ಲ ನದಿಗಳು ಗಂಗಾ ನದಿಯ ಉಪನದಿಗಳಾಗಿವೆ. ಪ್ರವಾಹದಿಂದ ಬೆಟ್ಟಗಳ ಪ್ರದೇಶದಲ್ಲಿ ವ್ಯಾಪಕ ಆತಂಕ ಹಾಗೂ ಹಾನಿ ಉಂಟಾಗಿದೆ.

ಎನ್.ಟಿ.ಪಿ.ಸಿ.ಯ ತಪೋವನ್ - ವಿಷ್ಣುಘಡ ಜಲ ವಿದ್ಯುತ್ ಯೋಜನೆ ಹಾಗೂ ಋಷಿ ಗಂಗಾ ಜಲ ವಿದ್ಯುತ್ ಯೋಜನೆಗಳಿಗೆ ತೀವ್ರ ಹಾನಿಯಾಗಿದೆ. ಇಲ್ಲಿನ ಹಲವಾರು ಕಾರ್ಮಿಕರು ನೀರು ತುಂಬಿದ ಕೊಳವೆಗಳಲ್ಲಿ ಸಿಲುಕಿರುವ ಆತಂಕವಾಗಿದೆ. ತಪೋವನ ಯೋಜನೆ ಪ್ರದೇಶದಲ್ಲಿ ಸಿಲುಕಿದ್ದ 16 ಜನರನ್ನು ರಕ್ಷಿಸಲಾಗಿದೆ. ಆದರೂ, 125 ಜನರು ಕಾಣೆಯಾಗಿದ್ದಾರೆ. ರಾತ್ರಿಯಾದಂತೆ ಸೂಕ್ಷ್ಮವಾಗಿರುವ ಹಿಮಾಚಲ ಪ್ರದೇಶದಲ್ಲಿ ರಕ್ಷಣಾ ಕಾರ್ಯ ಕಷ್ಟವಾಗುತ್ತಿದೆ.

ಏಳು ಮೃತದೇಹಗಳನ್ನು ಇದುವರೆಗೂ ವಶಪಡಿಸಿಕೊಳ್ಳಲಾಗಿದೆ ಹಾಗೂ ಕನಿಷ್ಠ 125 ಜನರು ಕಾಣೆಯಾಗಿದ್ದಾರೆ ಎಂದು ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ತಿಳಿಸಿದ್ದಾರೆ.

ಪ್ರವಾಹಕ್ಕೆ ಸಿಲುಕಿ ನದಿಗಳ ಮಾರ್ಗದಲ್ಲಿದ್ದ ಹಲವಾರು (2ನೇ ಪುಟಕ್ಕೆ)



ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಹಿಮಪಾತದ ನಂತರ ಉಂಟಾಗಿರುವ ಪ್ರವಾಹದ ದೃಶ್ಯ.

### 2013ರ ಕೇದಾರನಾಥ ಪ್ರವಾಹದ ಕಹಿ ನೆನಪು

**ಡೆಹರಾಡೂನ್, ಫೆ. 7 - ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಹಿಮಪಾತದಿಂದ ಉಂಟಾಗಿರುವ ಭಾರೀ ಪ್ರವಾಹದ ಹಾನಿಯು 2013ರ ಕೇದಾರನಾಥ ಪ್ರವಾಹದ ಕಹಿ ನೆನಪು ಮರಳುವಂತೆ ಮಾಡಿದೆ. ಸೂಕ್ಷ್ಮ ಪರಿಸರ ಹೊಂದಿರುವ ರಾಜ್ಯದಲ್ಲಿ ಆಗಿನ ಪ್ರವಾಹದಿಂದ ವ್ಯಾಪಕ ಹಾನಿಯಾಗಿತ್ತು.**

**2013ರ ಜೂನ್ 16-17ರಂದು ಸಂಭವಿಸಿದ್ದ ಧಾರಾಕಾರ ಮಳೆಯಿಂದಾಗಿ ಹಿಂದೆಂದೂ ಕಾಣದ ವ್ಯಾಪಕ ಹಾನಿಯಾಗಿತ್ತು. ಮೇಘಸ್ಫೋಟದಿಂದಾಗಿ ಕೇದಾರನಾಥದಲ್ಲಿರುವ ಚೊರಬಾರಿ ಕೆರೆ ದಂಡೆ ಒಡೆದು ದೊಡ್ಡ ಪ್ರಮಾಣದ ಕ್ಷಿಪ್ರ ಪ್ರವಾಹ ಉಂಟಾಗಿತ್ತು. ಇದರಿಂದ ಮೂಲಭೂತ ಸೌಲಭ್ಯ, ಕೃಷಿ ಜಮೀನುಗಳಿಗೆ ಭಾರೀ ಹಾನಿಯಾಗುವ ಜೊತೆಗೆ ಸಾವು - ನೋವುಗಳು ಸಂಭವಿಸಿದ್ದವು.**

**ಆದರೆ, ಆಗ ಮಳೆಯಿಂದ ವಿನಾಶ ಉಂಟಾಗಿತ್ತು. ಭಾನುವಾರ ಶುಭ್ರ ಹಗಲಿನಲ್ಲಿ ವಿಕೋಪ ಉಂಟಾಗಿದೆ. ಈ ಬಾರಿ ವಾತಾವರಣ ಅನುಕೂಲಕರವಾಗಿದ್ದರಿಂದ ತ್ವರಿತವಾಗಿ ನೆರವು ರವಾನಿಸಲು ಸಾಧ್ಯವಾಗಿದೆ. ತಪೋವನ - ರೇನಿ ಜಲ ವಿದ್ಯುತ್ ಘಟಕದಲ್ಲಿ 150 ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದರು. ಇವರಲ್ಲಿ 125 ಜನ ಕಾಣೆಯಾಗಿದ್ದು, ಅವರ ರಕ್ಷಣೆಗೆ ಅತಿ ಹೆಚ್ಚಿನ ಒತ್ತು ನೀಡಲಾಗುತ್ತಿದೆ.**

# ಎಸ್‌ಟಿ ಹೋರಾಟ ಬಿಡೆವು

### ಎಸ್‌ಟಿ ಮೀಸಲಾತಿಗೆ ಕುರುಬರ ಒಕ್ಕೊರಲ ಬೇಡಿಕೆ, ಮೀಸಲಾತಿ ಸಿಗುವವರೆಗೆ ಹೋರಾಟದ ಬದ್ಧತೆಯೊಂದಿಗೆ ಬೆಂಗಳೂರಿನಲ್ಲಿ ಪೂರ್ಣಗೊಂಡ ನಿರಂಜನಾನಂದ ಶ್ರೀಗಳ ಪಾದಯಾತ್ರೆ

ಬೆಂಗಳೂರು, ಫೆ. 7 - ಕುರುಬ ಸಮುದಾಯಕ್ಕೆ ಎಸ್.ಟಿ. ಮೀಸಲಾತಿ ಸಿಗುವ ತನಕ ನಿರಂತರ ಹೋರಾಟ ನಡೆಸುವ ಬದ್ಧತೆಯೊಂದಿಗೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು ಕಾಗಿನೆಲೆಯಿಂದ ಆರಂಭಿಸಿದ ಪಾದಯಾತ್ರೆ, ಬೃಹತ್ ಸಮಾವೇಶದೊಂದಿಗೆ ತೆರೆ ಕಂಡಿದೆ.

ಕಾಗಿನೆಲೆಯಿಂದ ಆರಂಭವಾಗಿದ್ದ ಶ್ರೀಗಳ ಪಾದಯಾತ್ರೆ, ಬೆಂಗಳೂರಿಗೆ ತಲುಪಿ ಮಾದನಾಯಕನ ಹಳ್ಳಿಯಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿತ್ತು. ರಾಜ್ಯ ಸರ್ಕಾರ ಕೂಡಲೇ ಎಸ್ಟಿ ಸ್ಥಾನಮಾನ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಹಕ್ಕೊತ್ತಾಯ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಿರಂಜನಾಂದ ಪುರಿ ಶ್ರೀಗಳು, ನಮ್ಮ ಹೋರಾಟ ಯಾರ ಪರವೂ ಅಲ್ಲ - ವಿರುದ್ಧವೂ ಅಲ್ಲ. ಯಾವ ಪಕ್ಷದ ಪರ ಇಲ್ಲವೇ ವಿರುದ್ಧವಲ್ಲ. ಕೇವಲ ಎಸ್‌ಟಿ ಹಕ್ಕು ಪಡೆಯಲು ನಮ್ಮ ಹೋರಾಟ ಎಂದರು.

ನಾವು ಬೇರೆಯರವಂತೆ ಬ್ಲಾಕ್‌ಮೇಲ್ ಮಾಡುವವರಲ್ಲ. ನಾವು ಪ್ರೀತಿಯಿಂದ ಬೇಡುತ್ತಿದ್ದೇವೆ, ನಾಡ ದೊರೆಯಾಗಿ ಅದೇ ಪ್ರೀತಿಯಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ. ಈ ವಿಚಾರವಾಗಿ ನಾವು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಎಸ್‌ಟಿ ಹಕ್ಕು ಪಡೆಯುತ್ತೇವೆ ಎಂದು ಶ್ರೀಗಳು ತಿಳಿಸಿದರು.

ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ಬಂದಿದ್ದ ಕಂದಾಯ ಸಚಿವ ಆರ್.ಅಶೋಕ್ ಅವರು ಕುರುಬರನ್ನು ಎಸ್ ಟಿ ಪಟ್ಟಿಗೆ ಸೇರ್ಪಡೆ ಮಾಡಬೇಕೆನ್ನುವ ಮನವಿ ಪತ್ರವನ್ನು ಸ್ವೀಕರಿಸಿದರು. ಸಮಾವೇಶದಲ್ಲಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ಎಸ್‌ಟಿ ಮೀಸಲಾತಿ ಪಡೆಯುವ ಸಲುವಾಗಿ ಕೊನೆಯವರೆಗೂ ಕಾಗಿನೆಲೆ ಶ್ರೀಗಳ (4ನೇ ಪುಟಕ್ಕೆ)



## ಸರ್ಕಾರದ ವಿರುದ್ಧ ಸಚಿವರ ಹೋರಾಟ ನಾಚಿಕೆಗೇಡು

ಬೆಂಗಳೂರು, ಫೆ. 7 - ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರ್ಪಡೆ ಮಾಡುವುದು ಚಿಟಕಿ ಹೊಡೆದಷ್ಟೇ ಸುಲಭದ ಕೆಲಸ. ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. ಹೀಗಿರುವಾಗ ಸಚಿವ ಕೆ.ಎಸ್. ಈಶ್ವರಪ್ಪ ಯಾರ ವಿರುದ್ಧ ಹೋರಾಟ ಮಾಡುತ್ತಿದ್ದಾರೆ? ಎಂದು ರಾಜ್ಯ ಕಾಂಗ್ರೆಸ್ ಪ್ರಶ್ನಿಸಿದೆ.

**ಎಸ್ಟಿ ಸೇರ್ಪಡೆ ಚಿಟಕಿ ಹೊಡೆದಷ್ಟೇ ಸುಲಭ, ಹೋರಾಟ ಯಾರ ವಿರುದ್ಧ? - ಕಾಂಗ್ರೆಸ್ ಪ್ರಶ್ನೆ**

ಬೆಂಗಳೂರಿನಲ್ಲಿ ಕುರುಬ ಸಮುದಾಯದ ಎಸ್‌ಟಿ ಮೀಸಲಾತಿಗಾಗಿ ನಡೆದ ಸಮಾವೇಶದಲ್ಲಿ ಸಚಿವ ಈಶ್ವರಪ್ಪ ಪಾಲ್ಗೊಂಡ ಸಂದರ್ಭದಲ್ಲಿ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಹೋರಾಟದ ಬಗ್ಗೆ ಉತ್ತರಿಸುವ ಧೈರ್ಯ ಬಿಜೆಪಿ ಹಾಗೂ ಸಚಿವರಿಗೆ ಇದೆಯೇ ಎಂದು ಕೇಳಿದೆ.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದೆ, ರಾಜ್ಯದಲ್ಲೂ ಬಿಜೆಪಿ ಸರ್ಕಾರ ಇದೆ. ಬಿಜೆಪಿಯ 25 ಸಂಸದರಿದ್ದಾರೆ. ಈಶ್ವರಪ್ಪನವರೂ ಬಿಜೆಪಿಯವರೇ ಆಗಿದ್ದು, ಸಂಪುಟ ದರ್ಜೆ ಸಚಿವರಾಗಿದ್ದಾರೆ. ಆದರೂ, ಎಸ್ಟಿ ಸೇರ್ಪಡೆಗೆ ಅವರು ಹೋರಾಟದ ನೇತೃತ್ವದ ವಹಿಸಿದ್ದಾರೆ ಎಂದು ಕಾಂಗ್ರೆಸ್ ಆಕ್ಷೇಪಿಸಿದೆ.

ಸಂಪುಟ ಸಚಿವರೇ ಮೀಸಲಾತಿಗೆ ಹೋರಾಟ ಮಾಡುತ್ತಿದ್ದಾರೆ ಎಂದರೆ, ಬಿಜೆಪಿ ಪಕ್ಷದಲ್ಲಿ, ಸರ್ಕಾರದಲ್ಲಿ ಸಮನ್ವಯ, ಸಾಮರಸ್ಯ ಇಲ್ಲ ಎಂದರ್ಥ. ಬಿಜೆಪಿಯ ಒಬ್ಬ ಸಚಿವರು ಅವರೇ ಸರ್ಕಾರದ ವಿರುದ್ಧ ಹೋರಾಡುವ ಸ್ಥಿತಿ ಅತ್ಯಂತ ನಾಚಿಕೆಗೇಡಿನದು (4ನೇ ಪುಟಕ್ಕೆ)

## ಮೇ 9ಕ್ಕೆ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ



ಬೆಂಗಳೂರು, ಫೆ.7 - ಕನ್ನಡ ಸಾಹಿತ್ಯ ಪರಿಷತ್‌ನ ರಾಜ್ಯಾಧ್ಯಕ್ಷ, ಜಿಲ್ಲಾಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಬರುವ ಮೇ 9ಕ್ಕೆ ಚುನಾವಣೆ ನಡೆಯಲಿದೆ.

ಮಾ.29ರಿಂದ ಏ.7ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ನಾಮಪತ್ರಗಳನ್ನು ಸ್ವೀಕರಿಸಲಾಗುತ್ತದೆ.

ಜಿಲ್ಲಾ ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಸಂಬಂಧಿಸಿದಂತೆ ಆಯಾ ಜಿಲ್ಲಾ ಕೇಂದ್ರದ ತಾಲ್ಲೂಕು ತಹ ಶೀಲ್ದಾರ್ (ಜಿಲ್ಲಾ ಕಸಾಪ ಚುನಾವಣಾಧಿಕಾರಿಗಳು) ಕಚೇರಿಯಲ್ಲಿ ನಾಮಪತ್ರ ಸಲ್ಲಿಸಬೇಕು.

ಏ.8ರಂದು ಎಲ್ಲ ನಾಮ ಪತ್ರಗಳ ಪರಿಶೀಲನೆ ನಡೆಯಲಿದೆ. ಏ.12ರ ಮಧ್ಯಾಹ್ನ 3 ಗಂಟೆಯ ವರೆಗೆ ನಾಮಪತ್ರಗಳನ್ನು ಹಿಂತೆ ಗೆದುಕೊಳ್ಳಲು ಅವಕಾಶ ಇರಲಿದೆ. ಏ.12ರಂದು ಅಂತಿಮವಾಗಿ ಸ್ಪರ್ಧೆಯಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಚುನಾವಣಾಧಿಕಾರಿಗಳ (4ನೇ ಪುಟಕ್ಕೆ)

## ಪ್ರಾಂತೀಯ ಭಾಷೆಯಲ್ಲಿ ವೈದ್ಯಕೀಯ, ತಾಂತ್ರಿಕ ಶಿಕ್ಷಣ : ಪ್ರಧಾನಿ ಆಶಯ



ಢೆಕಿಯಾಜುಲಿ (ಅಸ್ಸಾಂ), ಫೆ. 7 – ಪ್ರಾಂತೀಯ ಭಾಷೆಯಲ್ಲಿ ಕಲಿಸುವ ಕನಿಷ್ಠ ಒಂದು ವೈದ್ಯಕೀಯ ಕಾಲೇಜು ಹಾಗೂ ಒಂದು ತಾಂತ್ರಿಕ ಸಂಸ್ಥೆಯನ್ನು ಪ್ರತಿ ರಾಜ್ಯದಲ್ಲಿ ತೆರೆಯಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಭಿಪ್ರಾಯ ಪಟ್ಟಿದ್ದಾರೆ.

ಅಸ್ಸಾಂ ಹೆದ್ದಾರಿಯನ್ನು ಉನ್ನತೀಕರಿಸುವ 'ಅಸ್ಸಾಂ ಮಾಲಾ' ಯೋಜನೆಗೆ ಚಾಲನೆ ನೀಡುವ ಹಾಗೂ ಎರಡು ವೈದ್ಯಕೀಯ ಕಾಲೇಜುಗಳಿಗೆ ಶಿಲಾನ್ಯಾಸ ನೆರವೇರಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಿ ಅವರು ಮಾತನಾಡುತ್ತಿದ್ದರು. (4ನೇ ಪುಟಕ್ಕೆ)

## ರಾಜನಹಳ್ಳಿಗೆ ನಾಳೆ ಮುಖ್ಯಮಂತ್ರಿ



ದಾವಣಗೆರೆ ಫೆ.7 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಾಡಿದ್ದು ದಿನಾಂಕ 9 ರ ಮಂಗಳವಾರ ಹರಿಹರ ತಾಲ್ಲೂಕು ರಾಜನಹಳ್ಳಿಗೆ ಆಗಮಿಸಲಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಹೆಚ್.ಎ.ಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಪ್ರಯಾಣಿಸಿ ಬೆಳಿಗ್ಗೆ 11.25 ಕ್ಕೆ ರಾಜನಹಳ್ಳಿ ಹೆಲಿಪ್ಯಾಡ್‌ಗೆ ಆಗಮಿಸಿ, ಮಹರ್ಷಿ ವಾಲ್ಮೀಕಿ ಜಾತ್ರಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ನಂತರ ಮಧ್ಯಾಹ್ನ 1 ಕ್ಕೆ ಹರಿಹರ ತಾಲ್ಲೂಕಿನ ರಾಜನಹಳ್ಳಿ ಹೆಲಿಪ್ಯಾಡ್‌ನಿಂದ ಹೆಲಿಕಾಪ್ಟರ್ ಮೂಲಕ ಹೊರಡುವ ಮುಖ್ಯಮಂತ್ರಿಗಳು ಮಧ್ಯಾಹ್ನ 2.25 ಕ್ಕೆ ಬೆಂಗಳೂರಿನ ಹೆಚ್.ಎ.ಎಲ್. ವಿಮಾನ ನಿಲ್ದಾಣ ತಲುಪುವರು.

## ರೈತರ ಪ್ರತಿಭಟನೆ : ರೈತ ಆತ್ಮಹತ್ಯೆ

ಚಂಡೀಘಡ, ಫೆ. 7 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ಬೆಂಬಲಿಸುತ್ತಿದ್ದ ಹರಿಯಾಣದ ಜಿಂಡ್‌ನ ರೈತರೊಬ್ಬರು ಪ್ರತಿಭಟನೆ ನಡೆಸುತ್ತಿರುವ ಟಿಕ್ರಿ ಗಡಿಯ ಎರಡು ಕಿ.ಮೀ. ದೂರದಲ್ಲಿನ ಮರಕ್ಕೆ ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

52 ವರ್ಷದ ರೈತ ಕರಮ್‌ವೀರ್ ಸಿಂಗ್ ಆತ್ಮಹತ್ಯಾ ಪತ್ರವೊಂದನ್ನು ಬರೆದಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ ಎಂದು (2ನೇ ಪುಟಕ್ಕೆ)

## ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಯರ್ರಿಸ್ವಾಮಿ



ಜಗಳೂರು, ಫೆ. 7 - ಬರುವ ಮಾರ್ಚ್ ತಿಂಗಳಲ್ಲಿ ದಾವಣಗೆರೆಯಲ್ಲಿ ನಡೆಯುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಹತ್ತನೇ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹಿರಿಯ ಸಾಹಿತಿ ಎನ್.ಟಿ. ಯರ್ರಿಸ್ವಾಮಿ ಅವರಿಗೆ ಜಿಲ್ಲಾ ಕಸಾಪ ದಿಂದ ಅಧಿಕೃತವಾಗಿ ಆಹ್ವಾನಿಸಲಾಯಿತು.

ಪಟ್ಟಣದ ಗಂಗಾಂಭಿಕಾ ಬಡಾವಣೆಯಲ್ಲಿನ ಯರಿಸ್ವಾಮಿ ಅವರ ನಿವಾಸಕ್ಕೆ ಆಗಮಿಸಿದ ಜಿಲ್ಲಾ ಕಸಾಪ ಅಧ್ಯಕ್ಷರ ನೇತೃತ್ವದ ತಂಡ ಸಾಂಪ್ರದಾಯಿಕ ಅಹ್ವಾನ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕ.ಸಾ.ಪ. ಜಿಲ್ಲಾಧ್ಯಕ್ಷ ಡಾ. ಮಂಜುನಾಥ್ ಕುರ್ಕಿ, ಕೊರೊನ ಆಕ್ರಮಣದಿಂದ ಸಾಹಿತ್ಯಾಭಿರುಚಿ ಕಾರ್ಯಕ್ರಮಗಳಿಗೆ ಹಿನ್ನಡೆಯಾಗಿತ್ತು. ಇದೀಗ ಜಿಲ್ಲಾ ಸಮ್ಮೇಳನದ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಪುನಃ ಮೆರಗು ಬರಲಿದೆ (2ನೇ ಪುಟಕ್ಕೆ)

## ಹರಪನಹಳ್ಳಿ ತಾಲ್ಲೂಕು ವೀರಶೈವ ಸಭಾ ಅಧ್ಯಕ್ಷರಾಗಿ ರಾಜಶೇಖರ್



ಹರಪನಹಳ್ಳಿ, ಫೆ.7 - ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಘಟಕದ ಪದಾಧಿಕಾರಿಗಳನ್ನು ಶನಿವಾರ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಎಂ.ರಾಜಶೇಖರ್ ಒಟ್ಟು 21 ಸದಸ್ಯರ ಕಾರ್ಯಕಾರಿ ಸಮಿತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಿ.ಎಂ.ಕೊಟ್ರಯ್ಯ ತಿಳಿಸಿದ್ದಾರೆ.

ಪಟ್ಟಣದ ಆರ್.ಎಸ್.ಎನ್ ಶಾಲೆಯಲ್ಲಿ ಫೆ.6 ರಂದು ನಾಮಪತ್ರಗಳನ್ನು ವಾಪಸ್ಸು ಪಡೆಯುವ ದಿನಾಂಕವಾಗಿತ್ತು. ಈ ವೇಳೆ ಸಲ್ಲಿಸಿದ ಎಲ್ಲಾ ನಾಮಪತ್ರಗಳು ಸರಿಯಾಗಿದ್ದು ಅಧ್ಯಕ್ಷ (2ನೇ ಪುಟಕ್ಕೆ)







## ಚಿಕ್ಕಬಿದರಿಯಲ್ಲಿ ವಿಶೇಷ ಆರೋಗ್ಯ ತಪಾಸಣಾ ಶಿಬಿರಕ್ಕೆ ಡಿಸಿ ಚಾಲನೆ

# ಮಾಲಿನ್ಯ ನಿಯಂತ್ರಣಕ್ಕೆ ಕಾರ್ಖಾನೆಗೆ ಸೂಚನೆ

ಹರಿಹರ, ಫೆ. 7- ಹರಿಹರ ತಾಲ್ಲೂಕು ಚಿಕ್ಕಬಿದರಿಯ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆರೋಗ್ಯ ಇಲಾಖೆ, ತಾಲ್ಲೂಕು ಪಂಚಾಯತ್ ಸಹ ಯೋಗದಲ್ಲಿ ಭಾನುವಾರ ಏರ್ಪಡಿ ಸಲಾದ ವಿಶೇಷ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಚಾಲನೆ ನೀಡಿದರು.



ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಕ್ಕಬಿದರಿ ಸಮೀಪದ ಡಿಸ್ಟಿಲರಿ ಕಾರ್ಖಾನೆ ಯಿಂದ ಹೊರಸೂಸುವ ಹಾರು ಬೂದಿ ಯಿಂದಾಗಿ ಗ್ರಾಮಸ್ಥರಿಗೆ ತೀವ್ರ ತೊಂದರೆಯಾಗುತ್ತಿದೆ. ಆರೋಗ್ಯ ಸಮಸ್ಯೆಗಳು ತಲೆದೋ ರುತ್ತಿವೆ ಎಂಬುದಾಗಿ ಇಲ್ಲಿನ ಗ್ರಾಮ ಸ್ಥರು ದೂರು ನೀಡಿದ್ದರು. ಹೀಗಾಗಿ ಗ್ರಾಮಕ್ಕೆ ಇತ್ತೀಚೆಗೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಗ್ರಾಮಸ್ಥರ ಕೋರಿಕೆ ಯಂತೆ ಆರೋಗ್ಯ ಇಲಾಖೆ ವತಿಯಿಂದ ವಿಶೇಷ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ ಎಂದರು.

ಗ್ರಾಮದಲ್ಲಿ ವಿಶೇಷ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿದ್ದು, ಮಕ್ಕಳು, ವೃದ್ಧರು, ಮಹಿಳೆಯರು, ಗರ್ಭಿಣಿಯರು ಸೇರಿದಂತೆ ಎಲ್ಲರೂ ಆರೋಗ್ಯ ತಪಾಸಣೆ ನಡೆಸುವಂತೆ ಅನುಕೂಲ ಮಾಡಿಕೊಡಲಾಗಿದೆ. ಒಂದು ವೇಳೆ ಆರೋಗ್ಯ ಸಮಸ್ಯೆ ಗಂಭೀರವಾಗಿದ್ದಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ನೀಡು ವಂತೆಯೂ ಸೂಚಿಸಲಾಗಿದೆ. ಆರೋಗ್ಯ ಇಲಾಖೆ ನೀಡುವ ವರದಿಯನ್ನಾಧರಿಸಿ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು. ಗ್ರಾಮಸ್ಥರ ಆರೋಗ್ಯ ಕಾಪಾಡಲು ಜಿಲ್ಲಾಡಳಿತ ಬದ್ಧವಾಗಿದೆ ಎಂದರು.

ಕಾರ್ಖಾನೆಯಿಂದ ಹೊರ ಸೂಸುವ ಹಾರುಬೂದಿ ಹಾಗೂ ತ್ಯಾಜ್ಯದಿಂದ ಗಾಳಿ, ನೀರು ಕಲುಷಿತ ವಾಗಿರುವ ಬಗ್ಗೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಈ ಕುರಿತು ಬೆಂಗಳೂರಿನ ವಲಯ ಪರಿಸರ ಇಲಾಖಾ ಕಚೇರಿಗೆ ಮಾಹಿತಿ ನೀಡುವಂತೆ ತಿಳಿಸಲಾಗಿದೆ. ಕಾರ್ಖಾನೆಯವರು ಮಾಲಿನ್ಯ ನಿಯಂತ್ರಣಕ್ಕಾಗಿ ನೂತನ ತಂತ್ರಜ್ಞಾನ ಅಳವಡಿಕೆಗೆ ಸೂಚಿಸ ಲಾಗುವುದು, ಇದನ್ನು ಕಾರ್ಖಾನೆಯವರೂ ಕೂಡ ಅಳವಡಿಸಿ, ಸೂಚನೆಯನ್ನು ಪಾಲಿಸುವ ವಿಶ್ವಾಸವಿದೆ. ಈಗಾಗಲೇ ವಿವಿಧ ಇಲಾಖೆಗಳು ನೂತನ ತಂತ್ರಜ್ಞಾನಗಳನ್ನು ಅಳವಡಿಸಿ, ಪರಿಸರ ಮಾಲಿನ್ಯವನ್ನು ನಿಯಂತ್ರಿಸಿರುವ ನಿದರ್ಶನಗಳಿವೆ. ಇದರ ಜೊತೆಗೆ ಇಲ್ಲಿನ ಗ್ರಾಮಗಳ ನೀರಿನ ಮಾದರಿಯನ್ನು ಸಂಗ್ರಹಿಸಿ, ಬಳಕೆಗೆ ಯೋಗ್ಯವಿರುವ ಬಗ್ಗೆ ಪರೀಕ್ಷಿಸಿ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಗ್ರಾಮಸ್ಥರ ರಕ್ತದ ಮಾದರಿ ಸಂಗ್ರಹಿಸಿ ವಿಶೇಷ ಪರೀಕ್ಷೆಗೆ ಒಳಪಡಿಸುವಂತೆಯೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್ ಮಾತನಾಡಿ, ಇಲ್ಲಿನ ನೀರಿನ ಮಾದರಿಯನ್ನು ಸಂಗ್ರಹಿಸಿ, ಬಳಕೆಗೆ ಅರ್ಹವಾಗಿದೆಯೋ, ಇಲ್ಲವೋ ಎಂಬುದನ್ನು ಪರೀಕ್ಷಿಸಿ ವರದಿ ಸಲ್ಲಿಸಲಾಗುವುದು. ಒಂದು ವೇಳೆ ನೀರಿನಲ್ಲಿ ರಾಸಾಯನಿಕ ಮಿಶ್ರಣವಾಗಿರುವುದು ಕಂಡುಬಂದಲ್ಲಿ, ಉನ್ನತ ತಪಾಸಣೆಗೆ ಬೆಂಗಳೂರಿಗೆ ಪರೀಕ್ಷೆಗೆ ಮತ್ತೊಮ್ಮೆ ಕಳುಹಿಸಿಕೊಡಲಾಗುವುದು ಎಂದರು.

ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಹರಿಹರ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ನಟರಾಜ್, ಹರಿಹರ ತಾ.ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್, ಡಾ ಕೆ.ಎಂ. ಗಿರಿಜಾ, ಡಾ ವಿಶ್ವನಾಥ ಕುಂದಗೋಳಮಠ, ಡಾ ಮಮತಾ, ಡಾ ಮಹಮ್ಮದ್ ಆಲಿ, ಡಾ. ಶಿವರಾಜ್, ಡಾ ಎಸ್. ಹೇಮಂತ್, ಡಾ ಕಿರಣ್ ಕುಮಾರ್, ಡಾ. ಮರುಳಸಿದ್ದಪ್ಪ, ಡಾ ಪ್ರತಾಪ್, ಡಾ ಪ್ರಶಾಂತ ಕುಮಾರ್, ಡಾ ಮಮತಾ, ಡಾ ನಾಗವೇಣಿ, ಡಾ ಚೇತನ್, ಆರೋಗ್ಯ ಇಲಾಖೆ ಉಮ್ಮಣ್ಣ, ಪಿಎಸ್‌ಐ ಡಿ. ರವಿಕುಮಾರ್, ಲತಾ ತಾವಳೇಕರ್, ಎ.ಎಸ್.ಐ. ಮಂಜುಳಾ, ಸಂತೋಷ, ಹರಿಹರ ತಾ.ಪಂ. ಇಒ ಜೆ.ಡಿ.ಗಂಗಾಧರನ್, ಸಾರಥಿ ಪಿಡಿಒ ರಾಘವೇಂದ್ರ, ಗ್ರಾಮಸ್ಥರಾದ ಗ್ರಾಪಂ ಸದಸ್ಯ ತಿಪ್ಪೇಸ್ವಾಮಿ ಲಿಂಗನಗೌಡ್ರು, ನಾಗರಾಜ್, ಆಂಜನೇಯ ಹಾಗೂ ಇತರರು ಹಾಜರಿದ್ದರು.

> **ನೀರಿನಲ್ಲಿ ಫ್ಲೋರೈಡ್ ಅಂಶ**
>
> ಜಿಲ್ಲೆಯ ಕೆಲವು ಗ್ರಾಮಗಳಲ್ಲಿನ ನೀರಿನಲ್ಲಿ ಫ್ಲೋರೈಡ್ ಅಂಶ ಇರುವ ಬಗ್ಗೆ ಮಾಹಿತಿ ಬಂದಿದ್ದು, ಇದಕ್ಕೆ ಕಾರಣಗಳನ್ನು ಕಂಡುಹಿಡಿದು, ನಿಯಂತ್ರಣಕ್ಕೆ ಕ್ರಮ ವಹಿಸಲಾಗಿದೆ. ಇಲ್ಲಿನ ಗ್ರಾಮಗಳಲ್ಲಿ ಗಾಳಿ, ನೀರಿನಿಂದ ಹರಡುವ ರೋಗ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು.
>
> -ಶ್ರೀಮತಿ ಪದ್ಮಾ ಬಸವಂತಪ್ಪ,
> ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
> ಜಿಲ್ಲಾ ಪಂಚಾಯ್ತಿ

## ಮ್ಯಾಸಬ್ಯಾಡರ ಸಂಸ್ಕೃತಿ ಉಳಿಸಿ, ಬೆಳೆಸಲು ಶಾಸಕ ರಘುಮೂರ್ತಿ ಕರೆ



ಚಳ್ಳಕೆರೆ, ಫೆ.7- ಪ್ರಸ್ತುತ ಆಧುನಿಕ ಯುಗದಲ್ಲಿ ಮ್ಯಾಸಬ್ಯಾಡರ ಹಲವು ಬುಡಕಟ್ಟು ಸಂಸ್ಕೃತಿ ಮರೆಯಾಗುತ್ತಿದ್ದು, ಮ್ಯಾಸಬ್ಯಾಡರಲ್ಲಿ ಹೆಚ್ಚಿನ ಶಿಕ್ಷಣದ ಜೊತೆಗೆ ಕಣ್ಮರೆಯಾಗುತ್ತಿರುವ ಮ್ಯಾಸಬ್ಯಾಡರ ಸಂಸ್ಕೃತಿ ಉಳಿಸಿ, ಬೆಳೆಸಬೇಕಿದೆ ಎಂದು ಶಾಸಕ ಟಿ.ರಘುಮೂರ್ತಿ ಹೇಳಿದರು.

ನಗರದ ವಾಲ್ಮೀಕಿ ಕಲ್ಯಾಣ ಮಂಟಪ ಟ್ರಸ್ಟ್ ಮತ್ತು ನಾಯಕರ ಹಾಸ್ಟೆಲ್ ಕಮಿಟಿ ಇವರ ಸಂಯುಕ್ತ ಆಶ್ರಯದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಪಿ. ತಿಪ್ಪೇಸ್ವಾಮಿ ಅವರ ಮ್ಯಾಸಬ್ಯಾಡರ ಮೌಖಿಕ ಕಥನಗಳ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಪುಸ್ತಕವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಜನಪದ ವಿದ್ವಾಂಸರಾದ ಮೀರಾಸಾಬಿಹಳ್ಳಿ ಶಿವಣ್ಣ, ಜಾನಪದ ತಜ್ಞರು ಹಾಗೂ ಸಹಾಯಕ ಪ್ರಾಧ್ಯಾಪಕ ಡಾ. ಎಂ.ಎಸ್ ಮುತ್ಯಯ್ಯ, ಮಾಜಿ ಶಾಸಕ ಎಸ್. ತಿಪ್ಪೇಸ್ವಾಮಿ, ಲೇಖಕ ಟಿ. ತಿಪ್ಪೇಸ್ವಾಮಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಾಹಿತಿ ಮರಿಕುಂಟೆ ತಿಪ್ಪಣ್ಣ, ಹೆಚ್.ಪಿ ರಾಜೀವ್, ಡಾ. ಸಿ.ಪಿ.ಜಿ ಚಂದ್ರು, ಡಾ. ಬಿ. ರಾಜಶೇಖರಪ್ಪ, ಡಾ. ಡಿ. ಧರಣೇಂದ್ರಯ್ಯ, ಬಾಳೆಕಾಯಿ ರಾಮದಾಸ್, ತಿಪ್ಪೇಸ್ವಾಮಿ, ವೀರಭದ್ರಪ್ಪ, ಬೋರನಾಯಕ, ನಿಸರ್ಗ ಗೋವಿಂದರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಸಭಾ ಅಧ್ಯಕ್ಷರಾಗಿ ರಾಜಶೇಖರ್

**(1ನೇ ಪುಟದಿಂದ)** ಸ್ಥಾನಕ್ಕೆ ಎಂ.ರಾಜಶೇಖರ್ ನಾಮಪತ್ರ ಸಲ್ಲಿಸಿದ್ದು, ಉಳಿದಂತೆ 7 ಜನ ಮಹಿಳೆಯರು ಒಳಗೊಂಡು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಕಾರ್ಯಕಾರಿ ಸದಸ್ಯರು :** ಎಂ.ರಾಜಶೇಖರ್ ಅಧ್ಯಕ್ಷರು, ಟಿ.ಎಚ್.ಎಂ. ಮಲ್ಲಿಕಾರ್ಜುನ್, ಅಂಬ್ಲಿ ಮಂಜುನಾಥ, ಗಂಗಾಧರ್ ಗುರುಮಠ, ಎನ್. ಕೊಟ್ರೇಶ್, ಎಂ.ಟಿ.ಬಸವನಗೌಡ, ಕೆ.ಎಂ.ಗುರುಸಿದ್ದಯ್ಯ, ಮಟ್ಟಿ ಮೃತ್ಯುಂಜಯ, ಗೊಂಗಡಿ ನಾಗರಾಜ್, ಪಿ.ಬಸವರಾಜ್, ಪಿ.ರುದ್ರಪ್ಪ, ಕೆ.ಪ್ರಭಾಕರ್, ಪಿ.ಕರಿಬಸಪ್ಪ, ಬಸವರಾಜ್ ಮುಲಾಲಿ, ಜಿ.ಸಿ.ಪ್ರಭಾ ಅಜ್ಜಣ್ಣ, ಕೆ.ಪುಷ್ಪಾ ದಿವಾಕರ್, ಎ.ಎಂ.ಪದ್ಮಾವತಿ, ಜಿ.ಅಕ್ಕಮಹಾದೇವಿ, ಎಂ.ಶೋಭಾ ಚಂದ್ರಶೇಖರ್, ಕೆ.ಎಂ.ಉಮಾದೇವಿ, ಬಿ.ಎನ್.ವೀಣಾ ಆಯ್ಕೆಯಾದ ಸದಸ್ಯರು.

ಈ ಸಂದರ್ಭದಲ್ಲಿ ಎಂ.ರಾಜಶೇಖರ್, ಟಿ.ಎಚ್.ಎಂ.ಮಲ್ಲಿಕಾರ್ಜುನ್, ಮಟ್ಟಿ ಮೃತ್ಯುಂಜಯ, ಎಚ್.ಮಲ್ಲಿಕಾರ್ಜುನ್, ಕಾನಹಳ್ಳಿ ರುದ್ರಪ್ಪ, ಬಸವರಾಜ್, ಎಂ.ಅಜ್ಜಣ್ಣ, ಅಂಬ್ಲಿ ಮಂಜುನಾಥ್, ಪ್ರಭಾ ಅಜ್ಜಣ್ಣ, ಮಂಜುಳಾ, ಎಂ.ಶೋಭ, ವೀಣಾ, ಪದ್ಮಾವತಿ, ಉಪಸ್ಥಿತರಿದ್ದರು.

## ಸ್ಪರ್ಧಾತ್ಮಕ ಪರೀಕ್ಷೆ : ನಗರದಲ್ಲಿಂದು ತರಬೇತಿ

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಮತ್ತು ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆ ಭರ್ತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಪರೀಕ್ಷಾರ್ಥಿಗಳಿಗೆ ಇಂದಿನಿಂದ ಇದೇ ದಿನಾಂಕ 16 ರವರೆಗೆ ಉಚಿತ ಪರೀಕ್ಷಾ ಪೂರ್ವ ತರಬೇತಿ ನಡೆಯಲಿದೆ. ತರಬೇತಿಗೆ ಹಾಜರಾಗಲಿಚ್ಛಿಸುವ ಅಭ್ಯರ್ಥಿಗಳು ಇಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಕ್ಕೆ ಹಾಜರಾಗಬೇಕು. ವಿವರಕ್ಕೆ ದೂರವಾಣಿ ಸಂಖ್ಯೆ 08192-259446 ರಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಕೆ.ಎನ್. ಗಿರೀಶ್ ತಿಳಿಸಿದ್ದಾರೆ.

# ಸಮ್ಮೇಳನದ ಅಧ್ಯಕ್ಷರಾಗಿ ಯರ್‍ರಿಸ್ವಾಮಿ



**ನಿವಾಸಕ್ಕೆ ತೆರಳಿ ಅಧಿಕೃತವಾಗಿ ಆಹ್ವಾನಿಸಿದ ಕಸಾಪ ಅಧ್ಯಕ್ಷರ ತಂಡ**

**(1ನೇ ಪುಟದಿಂದ)** ಎಂದರು. ಜಗಳೂರು ಬರದ ನಾಡಾಗಿದ್ದರೂ ಭಾವನಾತ್ಮಕ ನೆಲೆಗಟ್ಟಿನಲ್ಲಿ ವೈವಿಧ್ಯಮಯ ಸಾಹಿತ್ಯದ ಮಜಲುಗಳನ್ನು ಒಳಗೊಂಡಿದೆ. ಬಯಲು ಸೀಮೆಯ ಪುತ್ರರಾಗಿರುವ ಯರ್‍ರಿಸ್ವಾಮಿ ಅವರು ಸಾಮಾಜಿಕ ಮತ್ತು ಸಮಕಾಲೀನ ಸಮಸ್ಯೆಗಳನ್ನು ಸಮೀಪದಿಂದ ಕಂಡಿರುವಂತಹ ವ್ಯಕ್ತಿ. ಇಂತಹವರನ್ನು ಜಿಲ್ಲಾ ಮಟ್ಟದ ಪದಾಧಿಕಾರಿಗಳು ಸರ್ವಾನುಮತದಿಂದ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಸಂತಸ ತಂದಿದೆ ಎಂದರು.

ಕ.ಸಾ.ಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಮಾತನಾಡಿ, ಇಳಿ ವಯಸ್ಸಿನಲ್ಲಿಯೂ ಸೃಜನಶೀಲ ಸಾಹಿತಿಯಾಗಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಎನ್.ಟಿ. ಎರ್‍ರಿಸ್ವಾಮಿ ಅವರು ಕನ್ನಡ ನೆಲದ ಜ್ವಲಂತ ಸಮಸ್ಯೆಗಳ ಧ್ವನಿಯಾಗಲಿದ್ದಾರೆ ಎಂದರು.

ಸಮ್ಮೇಳನದ ಅಧ್ಯಕ್ಷರಾದ ಎನ್.ಟಿ. ಯರ್‍ರಿಸ್ವಾಮಿ ಮಾತನಾಡಿ, ನಾನು ಬಾಲ್ಯ ಜೀವನದಲ್ಲಿ ಕಂಡಂತಹ ಪ್ರಾಯೋಗಿಕ ಅನುಭವಗಳೇ ಸಾಹಿತ್ಯದ ಬೌದ್ಧಿಕ ಚಿಂತನೆಯ ತಳಹದಿಯಾದವು. ಗ್ರಾಮೀಣ ಸೊಗಡಿನ ಕೌಟುಂಬಿ ಕ ಹಿನ್ನೆಲೆಯ ನನಗೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಜವಾಬ್ದಾರಿ ನೀಡಿರುವುದು ನನಗೆ ಸಂತಸ ತಂದಿದೆ ಎಂದರು.

ಹಿರಿಯ ಸಾಹಿತಿ, ಕನ್ನಡ ಉಪನ್ಯಾಸಕ ಎಂ. ಬಸವಪ್ಪ ಮಾತನಾಡಿ ಯರ್‍ರಿಸ್ವಾಮಿ ಯವರ ಆಯ್ಕೆ ಜಗಳೂರು ತಾಲ್ಲೂಕಿನ ಎಲ್ಲಾ ಕನ್ನಡ ಪ್ರೇಮಿಗಳಿಗೆ ಸಂತಸ ತಂದಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಬಯಲಾಟ ಅಕಾಡೆಮಿ ಸದಸ್ಯ ರಾದ ಎನ್.ಎಸ್.ರಾಜ್, ಷಣ್ಮುಖಪ್ಪ, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ದಿಂಡೆಪ್ಪ, ಗೀತಾಂಜಲಿ ಪುಸ್ತಕ ಪ್ರಕಾಶಕ ಮೋಹನ್, ಸಾಹಿತಿಗಳಾದ ಡಿ.ಸಿ.ಮಲ್ಲಿಕಾರ್ಜುನ್, ಎಂ.ಎಸ್.ಬಸವೇಶ್, ಬಾಬುರೆಡ್ಡಿ, ಕಸಾಪ ತಾಲ್ಲೂಕು ಅಧ್ಯಕ್ಷ ಹಜರತ್ ಅಲಿ, ಪದಾಧಿಕಾರಿಗಳಾದ ಎಂ.ಡಿ.ಆಂಜನೇಯ, ಡಿ.ಟಿ. ಆದಂ, ಕೆ.ಸುಜಾತ ಮುಂತಾದವರು ಉಪಸ್ಥಿತರಿದ್ದರು.

## ಹಡಗಲಿ ತಾಲ್ಲೂಕು ಗ್ರಾ.ಪಂ. ಸದಸ್ಯರಿಗೆ ರೆಡ್ಡಿ ಸಮಾಜದಿಂದ ಸನ್ಮಾನ



ಹೂವಿನ ಹಡಗಲಿ, ಫೆ.7- ತಾಲ್ಲೂಕು ರೆಡ್ಡಿ ಸಮಾಜದಿಂದ ವಿವಿಧ ಗ್ರಾಮ ಪಂಚಾಯಿತಿಗಳ ಸದಸ್ಯರಾಗಿರುವ ನಾಗರಾಜ ತಿಗರಿ, ಪ್ರಭಾಕರ ಗುತ್ತಲ, ಶ್ರೀನಿವಾಸರೆಡ್ಡಿ, ಗಿರಿರಾಜರೆಡ್ಡಿ, ಹೆಚ್. ಬಸವರಾಜ, ಗೌರಮ್ಮ ಜಿ. ರೂಪಾ, ಶ್ರೀಕಾಂತ ರೆಡ್ಡಿ ಹಾಗೂ ನಾಗರಾಜರೆಡ್ಡಿ ಡಂಬಳ ಇವರಲ್ಲದೇ ತಾಲ್ಲೂಕು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರಾಗಿ ಚುನಾಯಿತರಾಗಿರುವ ಎನ್.ಡಿ. ರೇಖಾರವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ತಾಲ್ಲೂಕು ರೆಡ್ಡಿ ಸಮಾಜದ ಅಧ್ಯಕ್ಷ ಸಿ. ಮೋಹನರೆಡ್ಡಿ, ಕನ್ನಿಹಳ್ಳಿ ನಾಗರಾಜ, ಎಸ್. ದ್ವಾರಕೀಶ್‌ರೆಡ್ಡಿ ಪಾಲ್ಗೊಂಡಿದ್ದರು. ಪಟ್ಟಣದ ಮಲ್ಲನಕೇರಿ ಮಠದಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

## ರೈತರ ಪ್ರತಿಭಟನೆ : ರೈತ ಆತ್ಮಹತ್ಯೆ

**(1ನೇ ಪುಟದಿಂದ)** ಪೊಲೀಸರು ತಿಳಿಸಿದ್ದಾರೆ. ಭಾನುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ ಎಂದು ಬಹದ್ದೂರ್‌ಗರ್ ನಗರ ಪೊಲೀಸ್ ಠಾಣೆಯ ಎಸ್. ಹೆಚ್.ಒ. ವಿಜಯ್ ಕುಮಾರ್ ತಿಳಿಸಿದ್ದಾರೆ.

ಮೃತ ವ್ಯಕ್ತಿ ಬರೆದಿದ್ದಾರೆ ಎನ್ನಲಾಗುವ ಪತ್ರದಲ್ಲಿ, ಮೋದಿ ಸರ್ಕಾರ ಸಮಯ ಎಳೆಯುತ್ತಿದೆ. ಆದರೆ, ಕರಾಳ ಕಾಯ್ದೆಗಳನ್ನು ಯಾವಾಗ ವಾಪಸ್ ಪಡೆಯುತ್ತದೆಯೋ ಗೊತ್ತಿಲ್ಲ ಎಂದು ತಿಳಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ ಹದಿನೈದು ದಿನಗಳ ಹಿಂದೆ ಹರಿಯಾಣದ ಇನ್ನೊಬ್ಬರ ರೈತ ವಿಷ ಸೇವಿಸಿ ಟಿಕ್ರಿ ಗಡಿಯ ಬಳಿ ಮೃತಪಟ್ಟಿದ್ದರು. ಕಳೆದ ಡಿಸೆಂಬರ್‌ನಲ್ಲಿ ಪಂಜಾಬ್‌ನ ರೈತರೊಬ್ಬರು ಟಿಕ್ರಿ ಗಡಿ ಬಳಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅದಕ್ಕೂ ಮುಂಚೆ ಸಿಖ್ ಪೂಜಾರಿ ಸಂತ ರಾಮ್ ಸಿಂಗ್ ಅವರು ಸಿಂಗುಪ ಗಡಿ ಬಳಿ ಮೃತಪಟ್ಟಿದ್ದರು.

## ಹಿರಿಯ ಪತ್ರಕರ್ತ ಮುರುಗೇಶ್ ನಿಧನ



ಚಿತ್ರದುರ್ಗ,ಫೆ.7- ಇಲ್ಲಿನ 'ಪ್ರಿಯ' ದಿನಪತ್ರಿಕೆ ಸಂಪಾದಕರೂ ಆದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಮುರುಗೇಶ್ ಅವರು ಇಂದು ನಿಧನರಾದರು. ಅವರಿಗೆ ಸುಮಾರು 69 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಮುರುಗೇಶ್ ಅವರ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ದಾವಣಗೆರೆಯ ಹಿರಿಯ ಪತ್ರಿಕೋದ್ಯಮಿ ಪೆ.ನಾ. ಗೋಪಾಲರಾವ್, ವಿ. ಬಸವರಾಜಯ್ಯ, ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷ ವೀರಪ್ಪ ಎಂ.ಭಾವಿ, ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ, ಖಜಾಂಚಿ ಮಾಗನೂರು ಮಂಜಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

## ಬೊಜ್ಜು ಕರಗಿಸುವ ಶಿಬಿರ

ದಾವಣಗೆರೆ, ಫೆ. 7- ಬೊಜ್ಜು ಕರಗಿಸುವ ಶಿಬಿರವು ಇದೇ ದಿನಾಂಕ 10ರ ಬುಧವಾರದಿಂದ ಒಂದು ತಿಂಗಳ ಕಾಲ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನ ಶ್ರೀ ವೆಂಕಟೇಶ್ವರ ದೇವಸ್ಥಾನ ಪಕ್ಕದ ಭಾರತ್ ಸೇವಾದಳ ಹಾಲ್‌ನಲ್ಲಿ ನಡೆಯಲಿದೆ.

ಈ ಶಿಬಿರದಲ್ಲಿ ಡೈನಾಮಿಕ್ ಯೋಗ, ಪ್ರಾಣಾಯಾಮ, ಧ್ಯಾನ ಕಲಿಸಿಕೊಡಲಾಗು ವುದು. ಯೋಗ ಪಟು ಶ್ರೀಮತಿ ಸರಸ್ವತಿ ಕಿರುವಾಡಿ ಶಿಬಿರ ನಡೆಸಿಕೊಡಲಿದ್ದಾರೆ. ಆಸಕ್ತರು 220733, ಮೊಬೈಲ್ : 98447 07080 ಇಲ್ಲಿ ಸಂಪರ್ಕಿಸಿ.

## ರಾಮಮಂದಿರ ನಿರ್ಮಾಣಕ್ಕೆ ಆರ್.ಎಲ್.ಶಿವಪ್ರಕಾಶ್ ಲಕ್ಷ ದೇಣಿಗೆ



ದಾವಣಗೆರೆ, ಫೆ.7 - ಮಹಾನಗರ ಪಾಲಿಕೆ ಸದಸ್ಯರೂ ಆದ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ಎಲ್. ಶಿವಕಪ್ರಕಾಶ್ ಅವರು ರಾಮಮಂದಿರ ನಿರ್ಮಾಣಕ್ಕೆ ಒಂದು ಲಕ್ಷ ರೂ. ಹಾಗೂ ಬೆಳ್ಳಿ ಇಟ್ಟಿಗೆಯೊಂದಿಗೆ ಒಟ್ಟು 1.37 ಲಕ್ಷ ರೂ. ಗಳನ್ನು ದೇಣಿಗೆ ನೀಡಿದ್ದಾರೆ.

## ಗುಡೇಕೋಟೆ ಮಠದ ಬಣವೆಗೆ ಬೆಂಕಿ

ಕೂಡ್ಲಿಗಿ, ಫೆ.7- ತಾಲ್ಲೂಕಿನ ಗುಡೇಕೋಟೆಯ ವಿರಕ್ತ ಮಠದಲ್ಲಿರುವ ಶೇಂಗಾ ಉಬ್ಬಲು ಬಣವೆಗೆ ಶನಿವಾರ ಮಧ್ಯಾಹ್ನ ಆಕಸ್ಮಿಕ ಬೆಂಕಿ ತಗುಲಿ ಸಹಸ್ರಾರು ರೂ.ನಷ್ಟು ನಷ್ಟವಾಗಿದೆ. ಈ ಬಣವೆಯು ಮಠದ ಶ್ರೀ ವೀರೇಂದ್ರ ಸ್ವಾಮೀಜಿಗೆ ಸೇರಿದ್ದೆಂದು ಹೇಳಲಾಗಿದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಭೇಟಿ ನೀಡಿದ್ದರು.

## ನಗರದಲ್ಲಿ ಇಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

# ಉತ್ತರಾಖಂಡಕ್ಕೆ ಹಿಮಪಾತದ ಆಘಾತ

**(1ನೇ ಪುಟದಿಂದ)** ಮನೆಗಳು ಕೊಚ್ಚಿ ಹೋಗಿವೆ. ಹಲವಾರು ಜನನಿಬಿಡ ಪ್ರದೇಶಗಳಲ್ಲೂ ಹಾನಿಯಾಗಿರುವ ಆತಂಕವಿದೆ. ಹಲವಾರು ಹಳ್ಳಿಗಳ ಜನರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸಲಾಗಿದೆ. ನದಿ ತಳ ಪಾತ್ರದಲ್ಲಿರುವ ಜನರು ಸುರಕ್ಷಿತವಾಗಿರುವುದನ್ನು ಅಧಿಕಾರಿಗಳು ಸಂಜೆ ವೇಳೆ ಖಚಿತಪಡಿಸಿದ್ದಾರೆ.



ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಷಿಮಠದಲ್ಲಿ ಹಿಮಪಾತವಾದ ಪ್ರವಾಹ ಉಕ್ಕಿ ಬರುತ್ತಿರುವ ದೃಶ್ಯ.

ರಿಶಿ ಗಂಗಾಗೆ ನಿರ್ಮಿಸಲಾಗಿದ್ದ 13.2 ಮೆಗಾವ್ಯಾಟ್ ಸಣ್ಣ ಜಲ ವಿದ್ಯುತ್ ಘಟಕ ಕೊಚ್ಚಿ ಹೋಗಿದೆ. ಆದರೆ, ನೀರಿನ ಮಟ್ಟ ನಿಯಂತ್ರಿಸಿದ್ದರಿಂದ ನದಿಯ ತಳಪಾತ್ರದಲ್ಲಿದ್ದ ಜನರು ಸುರಕ್ಷಿತವಾಗಿದ್ದಾರೆ ಎಂದು ಕೇಂದ್ರ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬ ತಿಳಿಸಿದ್ದಾರೆ.

ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಜಲ ವಿದ್ಯುತ್ ಘಟಕದ ಸುರಂಗಗಳಲ್ಲಿ ಸಿಲುಕಿದ್ದ ಹಲವರನ್ನು ರಕ್ಷಿಸಲಾಗಿದೆ. ಇನ್ನೊಂದು ಸುರಂಗದಲ್ಲೂ ಸೈನ್ಯದ ಜೊತೆಗೂಡಿ ರಕ್ಷಣಾ ಕಾರ್ಯ ನಡೆಸಲಾಗುತ್ತಿದೆ.

ಪ್ರವಾಹದಿಂದ ಧೌಲಿ ಗಂಗಾ ನದಿಗೆ ತಪೋವನದಲ್ಲಿ ನಿರ್ಮಿಸಲಾಗಿರುವ ಎನ್.ಟಿ.ಪಿ.ಸಿ.ಯ ಜಲ ವಿದ್ಯುತ್ ಘಟಕಕ್ಕೂ ಹಾನಿಯಾಗಿದೆ. ಆದರೆ, ನೆರೆಯ ಹಳ್ಳಿಗಳಿಗೆ ಯಾವುದೇ ಅಪಾಯ ಎದುರಾಗಿಲ್ಲ ಎಂದು ಕೇಂದ್ರ ಜಲ ಆಯೋಗಕ್ಕೆ ನೀಡಿರುವ ಮಾಹಿತಿಯಲ್ಲಿ ತಿಳಿಸಲಾಗಿದೆ.

ಘಟಕದ ಸಮೀಪ ಇರುವ ರೇನಿ ಹಳ್ಳಿ ಬಳಿಯ ಸೇತುವೆ ಕುಸಿದಿದೆ. ಇದರಿಂದಾಗಿ ಗಡಿ ಠಾಣೆಯ ಬಳಿಯ ಸಂಪರ್ಕಕ್ಕೆ ತೀವ್ರ ಅಡಚಣೆ ಎದುರಾಗಿದೆ. ಬೆಳಿಗ್ಗೆ 10.45ರ ಸಮಯದಲ್ಲಿ ಪ್ರವಾಹದ ಮಾಹಿತಿ ದೊರೆತಿತ್ತು. ನಂತರ ಜೋಶಿಮಠದಲ್ಲಿರುವ ಗಡಿ ಭದ್ರತಾ ಪಡೆಗಳು ಒಂದು ಗಂಟೆಯಲ್ಲೇ ಕಾರ್ಯಪ್ರವೃತ್ತವಾಗಿವೆ.

ಪೌರಿ, ತೆಹ್ರಿ, ರುದ್ರಪ್ರಯಾಗ, ಹರಿದ್ವಾರ ಹಾಗೂ ಡೆಹರಾಡೂನ್ ಸೇರಿ ಹಲವು ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿತ್ತು. ಐ.ಟಿ.ಬಿ.ಪಿ. ಹಾಗೂ ರಾಷ್ಟ್ರೀಯ ವಿಕೋಪ ಸ್ಪಂದನಾ ದಳಗಳನ್ನು ನೆರವು ಕಾರ್ಯಾಚರಣೆಗೆ ರವಾನಿಸಲಾಗಿತ್ತು.

ಜೋಶಿಮಠದಲ್ಲಿ ಉಂಟಾಗಿರುವ ಹಿಮಪಾತದ ಬಗ್ಗೆ ತೀವ್ರ ಕಳವಳವಾಗಿದೆ ಎಂದಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್, ಜನರ ಸುರಕ್ಷತೆಗಾಗಿ ಪ್ರಾರ್ಥಿಸುವುದಾಗಿ ಹೇಳಿದ್ದಾರೆ.

ಪರಿಸ್ಥಿತಿಯ ಮೇಲೆ ನಿರಂತರ ನಿಗಾ ವಹಿಸಿದ್ದೇವೆ. ಈ ಸಂದರ್ಭದಲ್ಲಿ ದೇಶ ಉತ್ತರಾಖಂಡದ ಜೊತೆಗೆ ಎಲ್ಲರ ಸುರಕ್ಷತೆಗಾಗಿ ಪ್ರಾರ್ಥಿಸುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಮುಖ್ಯಮಂತ್ರಿ ರಾವತ್ ಜೊತೆ ಮಾತನಾಡಿದ್ದು, ಪರಿಸ್ಥಿತಿ ನಿಭಾಯಿಸಲು ಸಾಧ್ಯವಿರುವ ಎಲ್ಲ ನೆರವು ನೀಡುವುದಾಗಿ ಹೇಳಿದ್ದಾರೆ.

ಮುಂದಿನ ಎರಡು ದಿನಗಳ ಕಾಲ ಯಾವುದೇ ಮಳೆಯ ಮುನ್ನೆಚ್ಚರಿಕೆ ಇಲ್ಲ ಎಂದು ಹವಾಮಾನ ಇಲಾಖೆ ನೀಡಿರುವುದು ಸ್ವಲ್ಪ ಸಮಾಧಾನ ತಂದಿದೆ.

## ಜಿ.ಎಂ. ರುದ್ರೇಶ್ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 7ನೇ ಕ್ರಾಸ್ (# 1057/40) ವಾಸಿ ಜಿ.ಎಂ. ರುದ್ರೇಶ್ (56) ಅವರು ದಿನಾಂಕ 7.02.2021 ರಂದು ಭಾನುವಾರ ಮಧ್ಯಾಹ್ನ 1.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.02.2021 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮದಲ್ಲಿ ನೆರವೇರಲಿದೆ.

## ಕೆ.ಜಿ. ಮಹೇಶ್ವರಪ್ಪ ನಿಧನ



ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದ ವಾಸಿ ಕೆ.ಜಿ. ಮಹೇಶ್ವರಪ್ಪ (68) ಅವರು ದಿನಾಂಕ 7.02.2021 ರಂದು ಭಾನುವಾರ ರಾತ್ರಿ 8.45 ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.02.2021ರಂದು ಸೋಮವಾರ ಮಧ್ಯಾಹ್ನ 1 ಗಂಟೆಗೆ ಕಾರಿಗನೂರು ಗ್ರಾಮದಲ್ಲಿ ನೆರವೇರಲಿದೆ.

## ಗುರುಲಿಂಗವ್ವ ತಾಳಿಕೋಟಿ ನಿಧನ



ದಾವಣಗೆರೆ ಕೆಟಿಜೆ ನಗರ 1ನೇ ಮುಖ್ಯರಸ್ತೆ, 12ನೇ ಕ್ರಾಸ್ ವಾಸಿ ದಿ. ಬಸವರಾಜ ತಾಳಿಕೋಟಿ ಇವರ ಧರ್ಮಪತ್ನಿ ಶ್ರೀಮತಿ ಗುರುಲಿಂಗವ್ವ ತಾಳಿಕೋಟಿ (68) ಅವರು, ದಿನಾಂಕ 07.02.2021 ರ ಭಾನುವಾರ ಸಂಜೆ 6.15 ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.02.2021 ರ ಸೋಮವಾರ ಬೆಳಿಗ್ಗೆ 11.30 ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಹುಲ್ಲತ್ತಿ ಬಸವರಾಜಪ್ಪ ನಿಧನ



ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ವಾಸಿ **ಹುಲ್ಲತ್ತಿ ಬಸವರಾಜಪ್ಪ** (79) ಅವರು ದಿನಾಂಕ 7.02.2021 ರಂದು ಭಾನುವಾರ ಸಂಜೆ 4 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.02.2021 ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ನಗರದ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖ ತಪ್ತ ಕುಟುಂಬವರ್ಗದವರು

**63607 06854, 81509 45271**

॥ಶ್ರೀ ಅಮರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ



ಎಂ.ಸಿ.ಸಿ. ಬಿ ಬ್ಲಾಕ್, ಕುವೆಂಪು ನಗರ, 18ನೇ ಮುಖ್ಯ ರಸ್ತೆ, ದಾವಣಗೆರೆ ವಾಸಿ ಶ್ರೀ ಬಸವರಾಜು ಎಸ್. (ಬ್ಲೂ ಮೌಂಟೇನ್) ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ:31.01.2021ನೇ ಭಾನುವಾರ ಮಧ್ಯಾಹ್ನ 3.40ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ನಾಗಮ್ಮ**

(ದಿ॥ ನಾಗೂರು ಶಿವಣ್ಣಗೌಡರು ಇವರ ಧರ್ಮ ಪತ್ನಿ)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 08.02.2021ನೇ ಸೋಮವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗೃಹದಲ್ಲಿ ಅಮರೇಶ್ವರ ಕೃಪ, 2ನೇ ಮೇನ್, 13ನೇ ಕ್ರಾಸ್, ಕೆ.ಟಿ.ಜೆ. ನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀ ಬಸವರಾಜು ಎಸ್. (ಬ್ಲೂ ಮೌಂಟೇನ್) ಮತ್ತು ಸಹೋದರರು, ಫೋ. : 94484 15049**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಚಾನಲ್‌ನಲ್ಲಿ ಅಪರಿಚಿತ ಮಹಿಳೆ ಶವ ಪತ್ತೆ

ಮಲೇಬೆನ್ನೂರು, ಫೆ.7- ಇಲ್ಲಿನ ಉಪ ವಿಭಾಗದಲ್ಲಿರುವ ಚಾನಲ್‌ನಲ್ಲಿ ಸುಮಾರು 45 ವರ್ಷ ವಯಸ್ಸಿನ ಅಪರಿಚಿತ ಮಹಿಳೆಯ ಶವ ನಿನ್ನೆ ನೀರಿನಲ್ಲಿ ತೇಲುತ್ತಾ ಬಂದಿದೆ. ದುಂಡು ಮುಖ, ಸಾಧಾರಣ ಶರೀರ ಹೊಂದಿರುತ್ತಾಳೆ ಹಾಗೂ ನೀಲಿ ಜಾಕೀಟು, ಹಳದಿ ಬಣ್ಣದ ಲಂಗ ತೊಟ್ಟಿರುತ್ತಾಳೆ.

ಸಂಬಂಧಪಟ್ಟವರು ಜಿಲ್ಲಾ ಕಂಟ್ರೋಲ್ ರೂಂ (ದೂರವಾಣಿ : 08192-253100) ಮಲೇಬೆನ್ನೂರು ಪೊಲೀಸ್ ಠಾಣೆ (ದೂರವಾಣಿ : 08192-268758)ಯನ್ನು ಸಂಪರ್ಕಿಸಬಹುದು.

# 3ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರೆಗೆ ಸಜ್ಜಾದ ರಾಜನಹಳ್ಳಿ ಮಠ

**ಜಿಗಳಿ ಪ್ರಕಾಶ್**







ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಮತ್ತು ನಾಳೆ 3ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರಾ ಮಹೋತ್ಸವ ಜರುಗಲಿದ್ದು, ಅದಕ್ಕಾಗಿ ಗುರುಪೀಠ ಸಕಲ ರೀತಿಯಲ್ಲಿ ಸಜ್ಜಾಗಿದೆ.

ಭಕ್ತರನ್ನು, ಅತಿಥಿಗಳು ಸ್ವಾಗತಿಸುವ ಫ್ಲೆಕ್ಸ್ ಕಟೌಟ್‌ಗಳನ್ನು ಎಲ್ಲೆಡೆ ರಾಜಾಜಿಸುತ್ತಿದ್ದು, ಹಸಿರು-ತೋರಣಗಳಿಂದ, ಹೂವಿನ ಅಲಂಕಾರದಿಂದ ಮಠ ನವ ವಧುವಿನಂತೆ ಸಿಂಗಾರಗೊಂಡಿದೆ. ರಾತ್ರಿ ವೇಳೆಯಲ್ಲಿ ಬಣ್ಣ ಬಣ್ಣದ ವಿದ್ಯುತ್ ದೀಪಗಳ ಅಲಂಕಾರ ಮಠದ ವೈಭವವನ್ನು ಹೆಚ್ಚಿಸಿದೆ.

ದಾವಣಗೆರೆಯ ಕೆಟಿಜೆ ನಗರ ಲಕ್ಷ್ಮಣ ಅವರು ಜಾತ್ರೆಯ ಶಾಮಿಯಾನವನ್ನು ವ್ಯವಸ್ಥಿತವಾಗಿ ಹಾಕಿದ್ದು, ವೇದಿಕೆ ಹಾಗೂ ಮಹಾಮಂಟಪ ಎಲ್ಲರನ್ನೂ ಕೈ ಬೀಸಿ ಕರೆಯುವಂತಿದೆ.

ದಾಸೋಹ ಮಂಟಪವೂ ವಿಶಾಲವಾಗಿದ್ದು, 100 ಊಟದ ಕೌಂಟರ್‌ಗಳನ್ನು ತೆರೆಯಲಾಗಿದೆ. ಕೊಮಾರನಹಳ್ಳಿಯ ವಾಸುದೇವಚಾರ್ ನೇತೃತ್ವದಲ್ಲಿ 500 ಜನ ಅಡುಗೆ ತಯಾರಕರ ತಂಡ ಇಲ್ಲಿ ತಿಂಡಿ, ನಂತರ ಇಡೀ ದಿನ ಗೋಧಿ ಹುಗ್ಗಿ, ಪಲ್ಯ, ರೊಟ್ಟಿ, ಅನ್ನ-ಸಾಂಬಾರ್ ನೀಡಲಿದ್ದಾರೆ.

ಜಾತ್ರೆಗಾಗಿ ಕೈಗೊಂಡಿದ್ದ ಎಲ್ಲಾ ಸಿದ್ಧತೆಗಳಿಗೆ ಭಾನುವಾರ ಸಂಜೆ ಅಂತಿಮ ರೂಪ ಕೊಡಲಾಯಿತು. ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಖುದ್ದು ಹಾಜರಿದ್ದು, ಜಾತ್ರೆಯ ಸಿದ್ಧತೆಗಳನ್ನು ಪೂರ್ಣಗೊಳಿಸಿದರು.

ಭಾರತೀಯ ಪರಂಪರೆಯಲ್ಲಿ ಹಲವು ಸಮುದಾಯಗಳು ಧಾರ್ಮಿಕ ಮಠ-ಪೀಠಗಳಿಂದ ಸಾಮಾಜಿಕ ಜಾಗೃತಿಯೊಂದಿಗೆ ಶೈಕ್ಷಣಿಕ ಕೊಡುಗೆ ನೀಡುತ್ತಾ ಬಂದಿವೆ. ಈ ನಿಟ್ಟಿನಲ್ಲಿ ವಾಲ್ಮೀಕಿ ನಾಯಕ ಜನಾಂಗವು ಶ್ರೀ ಮಹರ್ಷಿ ವಾಲ್ಮೀಕಿ ಅವರ ಹೆಸರಿನಲ್ಲಿ ಸಮಾಜದ ಹಿರಿಯರೆಲ್ಲರೂ ಸೇರಿ ಫೆಬ್ರವರಿ 9, 1998 ರಲ್ಲಿ ರಾಜನಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ ಗುರುಪೀಠ ಸ್ಥಾಪನೆಯೊಂದಿಗೆ, ಮಠದ ಪ್ರಥಮ ಜಗದ್ಗುರುಗಳಾಗಿ ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿ ಅವರಿಗೆ ಪಟ್ಟಾಭಿಷೇಕ ಮಾಡಲಾಯಿತು.

ಶ್ರೀಗಳು ವಾಲ್ಮೀಕಿ ರಾಮಾಯಣದ ಸಂದೇಶವನ್ನು ಸಮಾಜದ ಜನರಿಗೆ ತಿಳಿಸುತ್ತಾ, ಸಮಾಜವನ್ನು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಬೆಳೆಸಲು ಹಗಲಿರುಳು ಶ್ರಮಿಸಿದರು.

ಸಮಾಜದ ಜಾಗೃತಿಗಾಗಿ ಮತ್ತು ಅಭಿವೃದ್ಧಿಗಾಗಿ ಅವರು ನಡೆಸಿದ ಹೋರಾಟ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದೆ. ಪುಣ್ಯಾನಂದಪುರಿ ಶ್ರೀಗಳು ರೈಲ್ವೆ ಅಪಘಾತದಲ್ಲಿ ಅಕಾಲಿಕವಾಗಿ ಲಿಂಗೈಕ್ಯರಾದ ನಂತರ ಗುರುಪೀಠದ 2ನೇ ಪೀಠಾಧಿಪತಿಯಾಗಿ ಬಂದಂತಹ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಕಳೆದ 12 ವರ್ಷಗಳಿಂದ ನಾಡಿನ ಉದ್ದಗಲಕ್ಕೂ ನಿರಂತರವಾಗಿ ಸಂಚರಿಸಿ, ವಾಲ್ಮೀಕಿ ನಾಯಕ ಜನಾಂಗವು ಹಿಂದುಳಿಯಲು ಕಾರಣಗಳೇನೆಂಬುದನ್ನು ಅರಿತು, ಇತರೆ ಸಮಾಜಗಳಂತೆ ಮುಖ್ಯ ವಾಹಿನಿಗೆ ಬರಲು ಅಗತ್ಯವಾದ ರಚನಾತ್ಮಕ ಕಾರ್ಯಕ್ರಮ ಹಾಗೂ ಹೋರಾಟಗಳನ್ನು ಹಮ್ಮಿಕೊಂಡು ಸಮಾಜವನ್ನು ಸಂಘಟಿಸುತ್ತಾ ಬಂದಿದ್ದಾರೆ. ಜನ ಜಾಗೃತಿಗಾಗಿ 'ಜಾತ್ರೆ' ಎಂಬ ಪರಿಕಲ್ಪನೆಯೊಂದಿಗೆ ಕಳೆದೆರಡು ವರ್ಷಗಳಿಂದ ಗುರುಪೀಠದಲ್ಲಿ ವಾಲ್ಮೀಕಿ ಜಾತ್ರೆಯನ್ನು ನಡೆಸುತ್ತಾ ಸಮಾಜದ ಜನರಲ್ಲಿ ವೈಚಾರಿಕತೆ, ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಭಾವನಾತ್ಮಕ ಸಂಬಂಧವನ್ನು ಬೆಸೆಯುವ ಕೆಲಸ ಮಾಡುತ್ತಿದ್ದಾರೆ.

**ಈ ವರ್ಷದ ಜಾತ್ರೆಗೆ ರಾಷ್ಟ್ರಮಟ್ಟದ ಸಾಂಸ್ಕೃತಿಕ ಉತ್ಸವದ ಮೆರಗು**

**ಇಂದು, ನಾಳೆ ನಡೆಯಲಿರುವ ಜಾತ್ರೆಯಲ್ಲಿ ವಿವಿಧ ಮಠಾಧೀಶರು, ಮುಖ್ಯಮಂತ್ರಿ, ಸಚಿವರು, ಸಂಸದರು, ಶಾಸಕರು, ಚಿತ್ರನಟರು, ಹೋರಾಟಗಾರರು, ಸಾಧಕರು ಭಾಗವಹಿಸಲಿದ್ದಾರೆ**

ಸಮಾಜಕ್ಕೆ ಜನಸಂಖ್ಯೆಗನುಗುಣವಾಗಿ ಸಂವಿಧಾನಿಕವಾಗಿ ಸಿಗಬೇಕಾದ ಮೀಸಲಾತಿ ಪ್ರಮಾಣವನ್ನು ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರವೂ ಶೇ.3 ರಿಂದ ಶೇ.7.5ಕ್ಕೆ ಹೆಚ್ಚಿಸಬೇಕೆಂಬ ಬಲವಾದ ಒತ್ತಾಯ ಹಾಗೂ ಹೋರಾಟವನ್ನು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾಡುತ್ತಿದ್ದು, ಅದಕ್ಕಾಗಿ ರಾಜನಹಳ್ಳಿಯಿಂದ ರಾಜಧಾನಿಯವರೆಗೂ ಪಾದಯಾತ್ರೆಯನ್ನೂ ಮಾಡಿ, ಸರ್ಕಾರದ ಗಮನ ಸೆಳೆದಿದ್ದಾರೆ.

ಇದುವರೆಗೂ ಸಮಾಜಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸಮಾಜ ಜಾಗೃತಿಯಾಗಿ ಸಾಂಘಿಕ ಹೋರಾಟದ ಶಕ್ತಿ ಪ್ರದರ್ಶನ ಈ ಜಾತ್ರೆ ಮೂಲಕ ಆಗಬೇಕೆಂಬುದೂ ಶ್ರೀಗಳ ಆಶಯವಾಗಿದೆ.

ಈ ಜಾತ್ರೆ ಬುಡಕಟ್ಟು ಜನರಲ್ಲಿ ಹೊಸ ಬದಲಾವಣೆ ಹಾಗೂ ಸಮಾಜಕ್ಕೆ ಹೊಸ ದಿಕ್ಸೂಚಿ ಆಗಬೇಕೆಂಬ ನಿರೀಕ್ಷೆ ಹೊಂದಿರುವ ಶ್ರೀಗಳು 3ನೇ ವರ್ಷದ ಜಾತ್ರೆ ಯಶಸ್ಸಿಗಾಗಿ ರಾಜ್ಯದ 150 ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ, ಅವರ ಕುಂದು-ಕೊರತೆಗಳನ್ನು ಆಲಿಸಿ, ಸಂಘಟನೆ-ಹೋರಾಟದ ಬಗ್ಗೆ ತಿಳಿಸಿ, ಜಾತ್ರೆಗೆ ಆಹ್ವಾನ ನೀಡಿ ಬಂದಿದ್ದಾರೆ. ಸಮಾಜದ ಪ್ರಮುಖ ಜಾತ್ರೆಯಾಗಿ ಹೊರಹೊಮ್ಮಿರುವ ವಾಲ್ಮೀಕಿ ಜಾತ್ರೆಯನ್ನು ಈ ವರ್ಷ ಕೋವಿಡ್ ಇರುವ ಕಾರಣ ಕೋವಿಡ್ ನಿಯಮಾವಳಿಗಳನ್ನು ಪಾಲಿಸಿ, ಆಚರಿಸಲು ಕೆಲವು ಅಗತ್ಯ ಸಿದ್ದತೆಗಳನ್ನು ಜಿಲ್ಲಾಡಳಿತದ ಸಹಯೋಗದಲ್ಲಿ ಶ್ರೀಗಳು ಕೈಗೊಂಡಿದ್ದಾರೆ.

ಮಠದ ಆವರಣವನ್ನು ಸಂಪೂರ್ಣವಾಗಿ ಸ್ಯಾನಿಟೈಜ್ ಮಾಡಲಾಗಿದ್ದು, ಸ್ವಚ್ಛತೆಗೆ ಒತ್ತು ನೀಡಿ, ಅಲ್ಲಲ್ಲಿ ಜ್ವರ ತಪಾಸಣೆ ಹಾಗೂ ಸ್ಯಾನಿಟೈಜ್ ವ್ಯವಸ್ಥೆ ಕಲ್ಪಿಸಲಾಗಿದೆ. ವಿವಿಧ ಇಲಾಖೆಗಳಲ್ಲಿ ಜನರಿಗೆ ಸಿಗುವ ಸೌಲಭ್ಯಗಳನ್ನು ತಿಳಿಸುವುದಕ್ಕಾಗಿ ಜಾತ್ರೆಯಲ್ಲಿ 20ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಹಾಕಲಾಗಿದೆ.

ಮುಖ್ಯಮಂತ್ರಿ ಯಡಿಯೂರಪ್ಪ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸತೀಶ್ ಜಾರಕಿಹೊಳಿ, ಹೆಚ್.ಡಿ.ರೇವಣ್ಣ, ನಟ ಕಿಚ್ಚ ಸುದೀಪ್ ಅವರು ಹೆಲಿಕಾಪ್ಟರ್‌ನಲ್ಲಿ ಆಗಮಿಸುವ ಸಾಧ್ಯತೆ ಇದ್ದು, ಅದಕ್ಕಾಗಿ 4 ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ.

ಮಠದ ಹಿಂಭಾಗ ವಿಶಾಲವಾದ ಜಾಗದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದು, ಎಲ್ಲಾ ಕಡೆ ಜನರಿಗೆ ಮಾರ್ಗ ಸೂಚಿಗಳ ನಾಮಫಲಕ ಹಾಕಲಾಗಿದೆ.

**ಬಿಗಿ ಭದ್ರತೆ :** ಈ ಜಾತ್ರೆಗೆ 800 ಕ್ಕೂ ಹೆಚ್ಚು ಪೊಲೀಸರ ಭದ್ರತೆ ನೀಡಲಾಗಿದೆ. ಐಜಿಪಿ, ಎಸ್ಪಿ ಅವರ ಮಾರ್ಗದರ್ಶನದಲ್ಲಿ 5 ಡಿವೈಎಸ್ಪಿ, 16 ಸಿಪಿಐ, 39 ಪಿಎಸ್‌ಐ, 70 ಎಎಸ್‌ಐ ಮತ್ತು 550 ಪೊಲೀಸ್ ಸಿಬ್ಬಂದಿ, 2 ಕೆಎಸ್‌ಆರ್‌ಪಿ ತುಕಡಿ, 4 ಡಿಎಆರ್‌ಗಳನ್ನು ಭದ್ರತೆಗೆ ನೇಮಿಸಲಾಗಿದೆ ಎಂದು ಸಿಪಿಐ ಸತೀಶ್, ಪಿಎಸ್‌ಐ ರವಿಕುಮಾರ್ ಮಾಹಿತಿ ನೀಡಿದರು.

**ಡಿಸಿ, ಎಸ್ಪಿ ಭೇಟಿ :** ಭಾನುವಾರ ಸಂಜೆ ಮಠಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಅವರು ಜಾತ್ರೆಯ ಸಿದ್ದತೆ ಹಾಗೂ ಭದ್ರತೆಗಳನ್ನು ಶ್ರೀಗಳ ಸಮ್ಮುಖದಲ್ಲಿ ಪರಿಶೀಲಿಸಿದರು.

**ಸಾಂಸ್ಕೃತಿಕ ಉತ್ಸವದ ಮೆರಗು :** ಈ ವರ್ಷದ ಜಾತ್ರೆಗೆ ಜಿ.ಪಂ. ಮಾಜಿ ಅಧ್ಯಕ್ಷ ಡಾ.ವೈ.ರಾಮಪ್ಪ ಅವರ ಉಸ್ತುವಾರಿಯಲ್ಲಿ ರಾಷ್ಟ್ರಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಇಂದು ಸಂಜೆ 6 ರಿಂದ ರಾತ್ರಿ 10 ರವರೆಗೆ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ, ಅಸ್ಸಾಂ, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಒರಿಸ್ಸಾ, ಕೇರಳ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳ ಅಂತರರಾಷ್ಟ್ರೀಯ ಕಲಾವಿದರಿಂದ ವಿಭಿನ್ನ ರೀತಿಯ ಸಾಂಸ್ಕೃತಿಕ ಶೈಲಿಯ ಸಾಂಪ್ರದಾಯಿಕ ನೃತ್ಯಗಳು ಪ್ರದರ್ಶನಗೊಳ್ಳಲಿವೆ. ರಾತ್ರಿ 11 ಗಂಟೆಯಿಂದ ಹಾಸನ ಜಿಲ್ಲಾ ವಾಲ್ಮೀಕಿ ನಾಯಕ ಕಲಾ ಸಂಘದವರಿಂದ ಸಂಪೂರ್ಣ ರಾಮಾಯಣ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

**ಸಾಮೂಹಿಕ ವಿವಾಹ :** ಇಂದು ಬೆಳಿಗ್ಗೆ 8 ಗಂಟೆಗೆ ರಾಜನಹಳ್ಳಿಯಿಂದ ಶ್ರೀಮಠದವರೆಗೆ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ, ನಂತರ 9 ಗಂಟೆಗೆ ದೊಡ್ಡೇರಿಯ ಶ್ರೀ ಗುರು ದತ್ತಾವಧೂತ ಆಶ್ರಮದ ಶ್ರೀ ಸತ್‌ಉಪಾಸಿ ಮಲ್ಲಪ್ಪ ಸ್ವಾಮೀಜಿ ವಾಲ್ಮೀಕಿ ಧ್ವಜಾರೋಹಣದ ಮೂಲಕ ಜಾತ್ರೆಗೆ ಚಾಲನೆ ನೀಡುವರು.

10 ಗಂಟೆಗೆ ಸರ್ವ ಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಕೆ.ಬಿ.ಕೋಳಿವಾಡ, ಎಸ್.ರಾಮಪ್ಪ, ಹೆಚ್.ಪಿ.ರಾಜೇಶ್, ಬಿ.ಪಿ. ಹರೀಶ್, ಹೆಚ್.ಎಸ್.ಶಿವಶಂಕರ್, ಡಿ.ಜಿ.ಶಾಂತನಗೌಡ, ಮಾಹಿಮಾ ಪಟೇಲ್, ಅಬ್ದುಲ್ ಜಬ್ಬಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ರಾಜ್ಯಮಟ್ಟದ ಮಹಿಳಾ ಜಾಗೃತಿ ಸಮಾವೇಶವನ್ನು ಡಾ.ಮಲ್ಲಿಕಾ ಎಸ್.ಘಂಟಿ ಉದ್ಘಾಟಿಸುವರು. ಚಿತ್ರನಟಿ ಶೃತಿ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ರಾಜ್ಯ ಎಸ್ಟಿ ನೌಕರರ ಸಮಾವೇಶವನ್ನು ಎಸ್ಪಿ ರವಿ ಡಿ.ಚೆನ್ನಣ್ಣನವರ್ ಉದ್ಘಾಟಿಸಲಿದ್ದು, ಕೆಪಿಎಸ್‌ಸಿ ಸದಸ್ಯ ಡಾ. ರಂಗರಾಜ್ ವನದುರ್ಗ ಅಧ್ಯಕ್ಷತೆ ವಹಿಸುವರು.

ಸಂಜೆ 5 ಗಂಟೆಗೆ ಬುಡಕಟ್ಟು ಸಮುದಾಯಗಳ ಸಂಘಟನೆ ಹಾಗೂ ಸವಾಲುಗಳು ಕಾರ್ಯಕ್ರಮದಲ್ಲಿ ಮಾರಸಂದ್ರ ಮುನಿಯಪ್ಪ, ಹೆಚ್.ಕೆ. ರಾಮಚಂದ್ರಪ್ಪ, ಜಿ.ಟಿ.ಚಂದ್ರಶೇಖರ್, ಚಳುವಳಿ ರಾಜಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

# ಅಭಿವೃದ್ಧಿ ಯೋಜನೆಗಳಿಗೆ ಮುಖ್ಯಮಂತ್ರಿಗಳಿಂದ ಶೀಘ್ರ ಚಾಲನೆ

ರಾಣೇಬೆನ್ನೂರು, ಫೆ.7- ನಗರದಲ್ಲಿ ಹಮ್ಮಿಕೊಂಡಿರುವ ದಿನದ 24 ಗಂಟೆ ಕುಡಿಯುವ ನೀರು ಯೋಜನೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶೀಘ್ರದಲ್ಲಿಯೇ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ ಎಂದು ಶಾಸಕ ಅರುಣಕುಮಾರ ಪೂಜಾರ್ ಹೇಳಿದ್ದಾರೆ.

ತಾಲ್ಲೂಕಿನ ತುಮ್ಮಿನಕಟ್ಟಿ, ಮೆಣಸಿನಹಾಳ, ಲಿಂಗದಹಳ್ಳಿ ಸೇರಿದಂತೆ ವಿವಿಧ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆಯಿಂದ ಇಂದು ಹಮ್ಮಿಕೊಂಡಿದ್ದ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಅಮೃತಸಿಟಿ ಯೋಜನೆಯಲ್ಲಿ ಹಮ್ಮಿಕೊಂಡಿರುವ ನಿರಂತರ ಕುಡಿಯುವ ನೀರಿನ ಯೋಜನೆ ಬಹುತೇಕ ಪೂರ್ಣಗೊಂಡಿದೆ. ಎಪಿಎಂಸಿಯಲ್ಲಿ ನಿರ್ಮಾಣವಾದ ಸಮುದಾಯ ಭವನ, ಚಳಗೇರಿ, ಕರೂರ ಗ್ರಾಮದ ಕೆರೆ ತುಂಬಿಸುವ ಯೋಜನೆ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡುವರು ಎಂದರು.

ಈಗಾಗಲೇ 7.86 ಕೋಟಿ ರೂ. ವೆಚ್ಚದಲ್ಲಿ ಎರಡು ದಿನಗಳಿಂದ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಮೆಣಸಿನಹಾಳ ಸೇರಿದಂತೆ ವಿವಿಧ ಗ್ರಾಮಗಳ ರೈತರಿಗೆ ಅನುಕೂಲವಾಗುವ ಉದ್ದೇಶದಿಂದ ನೀರಾವರಿ ಸೌಲಭ್ಯ ಕಲ್ಪಿಸಬೇಕು ಎಂಬುದು



ರೈತರ ಒತ್ತಾಯವಾಗಿದ್ದು, ಈಗಾಗಲೇ ಯೋಜನೆಗೆ ಬೇಕಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದಷ್ಟು ಬೇಗ ಅನುದಾನ ದೊರೆಯಲಿದೆ. ಇನ್ನು ತುಮ್ಮಿನಕಟ್ಟಿ ಗ್ರಾಮದಲ್ಲಿಯೇ 1 ಕೋಟಿ ರೂ. ವೆಚ್ಚದಲ್ಲಿ ಆರ್‌ಡಿಪಿಆರ್ ಯೋಜನೆಯ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

**ರಾಣೇಬೆನ್ನೂರು**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಎಸ್‌ವೈ)ಯಲ್ಲಿ ತಾಲ್ಲೂಕಿನಲ್ಲಿ 17 ಕೋಟಿ ರೂ. ವೆಚ್ಚದಲ್ಲಿ ವಿವಿಧ ಭಾಗಗಳಲ್ಲಿ ರಸ್ತೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕ ಸಂತೋಷ್‌ಕುಮಾರ್ ಪಾಟೀಲ್, ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಬಸವರಾಜ ಕೇಲಗಾರ, ಬಿಜೆಪಿ ಮುಖಂಡರಾದ ಮಂಜಯ್ಯ ಚಾವಡಿ, ನಗರಸಭೆ ಸದಸ್ಯ ಪ್ರಕಾಶ ಪೂಜಾರ್ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

> **"ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಯಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. ಮೀಸಲಾತಿ ಬಂದ ನಂತರದಲ್ಲಿ ಬದಲಾವಣೆಯಾಗಿ ಸುಮಾರು 17 ಗ್ರಾ.ಪಂ.ಗಳಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. ಮುಂದಿನ ದಿನಗಳಲ್ಲಿ ಚುನಾವಣೆ ಎದುರಾಗುವ ಕ್ಷೇತ್ರ ವ್ಯಾಪ್ತಿಯ 23 ತಾಲ್ಲೂಕು ಪಂಚಾಯಿತಿ ಸ್ಥಾನಗಳು ಹಾಗೂ 4 ಜಿಲ್ಲಾ ಪಂಚಾಯಿತಿಯ ಸ್ಥಾನಗಳಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ.**
>
> **-ಅರುಣಕುಮಾರ ಪೂಜಾರ, ಶಾಸಕರು, ರಾಣೇಬೆನ್ನೂರು**

# ರಾಜನಹಳ್ಳಿ ವಾಲ್ಮೀಕಿ ಜಾತ್ರೆ : ಪಾದಯಾತ್ರೆಗೆ ಚಾಲನೆ



**ಹರಪನಹಳ್ಳಿ**

ಹರಪನಹಳ್ಳಿ, ಫೆ.7- ಹರಿಹರ ತಾಲ್ಲೂಕಿನ ರಾಜನಹಳ್ಳಿಯಲ್ಲಿ ಜರುಗಲಿರುವ ಮೂರನೇ ವರ್ಷದ ವಾಲ್ಮೀಕಿ ಜಾತ್ರೆಗೆ ಪಾದಯಾತ್ರೆ ಹೊರಟ ವಾಲ್ಮೀಕಿ ನಾಯಕ ಸಮಾಜದ ಬಂಧುಗಳಿಗೆ ಪಟ್ಟಣದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕೆಪಿಸಿಸಿ ಮಹಿಳಾ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಚಾಲನೆ ನೀಡಿದರು.

ಈ ವೇಳೆ ವಾಲ್ಮೀಕಿ ಜಾತ್ರಾ ಸಮಿತಿ ತಾಲ್ಲೂಕು ಅಧ್ಯಕ್ಷ ಹೆಚ್.ಕೆ. ಹಾಲೇಶ್, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ, ಉಪಾಧ್ಯಕ್ಷ ಶಿವಾನಂದ, ಪ್ರಧಾನ ಕಾರ್ಯದರ್ಶಿ ಗಿರಜ್ಜಿ ನಾಗರಾಜ್, ಸಂಘಟನಾ ಕಾರ್ಯದರ್ಶಿಗಳಾದ ನೀಲಗುಂದ ತಿಮ್ಮೇಶ್, ದ್ಯಾಪನಾಯಕನಹಳ್ಳಿ ಜಿ.ಕೆ. ಬಸವರಾಜ್, ಬಾನಳ್ಳಿ ಕೆಂಚನಗೌಡ, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ವಾಲ್ಮೀಕಿ ಸೇವಾ ಸಮಿತಿಯ ಹಳ್ಳಿಕೇರಿ ಎಚ್.ರಾಜಪ್ಪ, ಎಂ.ಪ್ರಾಣೇಶ್, ಏಕಲವ್ಯ ಸಂಘರ್ಷ ಸಮಿತಿಯ ತಾಲ್ಲೂಕು ಅಧ್ಯಕ್ಷ ರಾಯದುರ್ಗದ ಪ್ರಕಾಶ್, ವಾಲ್ಮೀಕಿ ನಾಯಕ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಕಂಚಿಕೇರಿ ಜಯಲಕ್ಷ್ಮಿ, ಗೌರವ ಅಧ್ಯಕ್ಷೆ ಟಿ.ಪದ್ಮಾವತಿ, ಕಾರ್ಯದರ್ಶಿ ಕೆ.ಸುಜಾತ, ಮಂಜುಳಾ, ಪವಿತ್ರ, ಹನುಮಕ್ಕ, ಮುಖಂಡರಾದ ನೀಲಗುಂದ ಮನೋಜಾ, ಪಿ.ಪರಶುರಾಮ, ಸಿ. ವೆಂಕಪ್ಪ, ಪೂಜಾರ್ ಮಂಜುನಾಥ್, ಗಿಡ್ಡಳ್ಳಿ ನಾಗರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿ ದುರ್ಗಾ ಪೂಜೆ, ದುರ್ಗಾ ದೀಪ ನಮಸ್ಕಾರ

ದಾವಣಗೆರೆ, ಫೆ.7- ವಿಶ್ವ ಮಧ್ವ ಮಹಾಪರಿಷತ್ (ಬೆಂಗಳೂರು) ವತಿಯಿಂದ ನಗರದ ಪಿಜೆ ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶ್ರೀ ದುರ್ಗಾ ಪೂಜೆ ಹಾಗೂ ದುರ್ಗಾ ದೀಪ ನಮಸ್ಕಾರ ವಿಶೇಷ ಪೂಜಾ ಕೈಂಕರ್ಯಗಳನ್ನು ಮೊನ್ನೆ ಸಂಜೆ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಅರ್ಚಕ ರಾಘವೇಂದ್ರ ಕುಲಕರ್ಣಿ ಅವರ ಅಮೃತ ಹಸ್ತದ ಆಶೀರ್ವಾದದೊಂದಿಗೆ ವಾಸುದೇವ ಆಚಾರ್ ಪಲ್ಲಕ್ಕಿ ದಂಪತಿಯಿಂದ ದುರ್ಗಾ ಪೂಜೆ ಮತ್ತು ದುರ್ಗಾ ದೀಪ ನಮಸ್ಕಾರ ನೆರವೇರಿಸಲಾಯಿತು. ಪಂಡಿತ ಡಾ. ವೆಂಕಟಗಿರೀಶಾಚಾರ್ ಮತ್ತು ಜಯತೀರ್ಥಾಚಾರ್ ಒಡೆಯರ್ ಅವರುಗಳು ಪ್ರವಚನ ನಡೆಸಿದರು.

ಭೀಮಸೇನಾಚಾರ್ ಕಲ್ಲಾಪುರ, ಕಂಪ್ಲಿ ಗುರುರಾಜಾಚಾರ್, ಶ್ರೀಧರ್ ಘಟಿಕರ್, ವೆಂಕಟೇಶ್ ನವರತ್ನ, ಪಿ.ಕೆ. ಪ್ರಕಾಶ್, ಸುತೀರ್ಥ ಕಟ್ಟಿ, ರಾಮಗೋಪಾಲ್, ಶಾಂತೇಶ್ ಗುತ್ತಲ್, ಹೆಚ್. ಎಸ್. ಗುರುರಾಜ್, ಪ್ರಾಣೇಶಾಚಾರ್ ಕಡೂರು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಿದ್ಯಾನಗರ ಮುಖ್ಯ ರಸ್ತೆ, 12, 13, 14, 15 ಮತ್ತು 16ನೇ ಕ್ರಾಸ್, ಆಂಜನೇಯ ದೇವಸ್ಥಾನ ಸುತ್ತಮುತ್ತ, ತರಳಬಾಳು ಬಡಾವಣೆ 12, 13 ಮತ್ತು 14 ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ 1ನೇ ಕ್ರಾಸ್ ನಿಂದ 10ನೇ ಕ್ರಾಸ್‌ವರೆಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀಮತಿ ಪ್ರೇಮಮ್ಮ ಯಾನೆ ಪ್ರೇಮಲೀಲಾ ಕೋಂ ಎ.ಎಸ್.ಶಂಭುಲಿಂಗಪ್ಪ** ವಯಸ್ಸು 57 ವರ್ಷ, ಕೋಗುಂಡೆ, ಚಿತ್ರದುರ್ಗ ತಾ & ಜಿಲ್ಲೆ ಇವರ ಪರವಾಗಿ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ:- ದಾವಣಗೆರೆ ತಾ: ಕಸಬಾ ಹೋಬಳಿ, ಶಾಬನೂರು ಗ್ರಾಮದ ರಿ.ಸ.ನಂ.205/1ಪಿರಲ್ಲಿ 02 ಎಕರೆ ಜಮೀನು **ದಿವಂಗತ ನಾರಪ್ಪ ಟಿ. ಯಾನೆ ದೊಡ್ಡನಾರಪ್ಪ ಬಿನ್ ಲೇಟ್ ಹನುಮಪ್ಪ, ಸೋಮಶೇಖರಯ್ಯ, ಮುನಿಯಪ್ಪ,** ಸೇರಿ ಜಂಟಿ ಯಾಗಿದ್ದ ಜಮೀನಿನಲ್ಲಿ 06 ಎಕರೆ 37 ಗುಂಟೆ ಪೈಕಿ ಇದರಲ್ಲಿ 02 ಎಕರೆ ವಿಭಾಗ ಮೂಲಕ 2697 ಖಾತೆ ನಂ.201 ಎಂದು **ಟಿ.ದೊಡ್ಡನಾರಪ್ಪ** ಹೆಸರಿಗೆ ಪಹಣಿ ಇರುತ್ತದೆ. ಈ ಜಮೀನಿನಲ್ಲಿ ದಿ|| ಸಣ್ಣ ನಾರಪ್ಪ ಬಿನ್ ಲೇಟ್ ಬಸಪ್ಪ ಇವರು 01 ಎಕರೆ ಜಮೀನನ್ನು ನನ್ನ ತಂದೆಯಿಂದ **ಎಂ.ಆರ್. 30/1980-81** ರ ಸಾಲಿನಲ್ಲಿ ಹಕ್ಕು ಬದಲಾವಣೆ ಮೂಲಕ ತಮ್ಮಗಳ ಒಪ್ಪಿಗೆ ಸಹಿ ಪಡೆಯದೇ ತಮ್ಮ ಹೆಸರಿಗೆ ಖಾತೆ, ಪಹಣಿ, ಮ್ಯುಟೇಷನ್‌ನಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ **ಎಂ.ಆರ್. ನಂ 148/88-89** ಸುಳ್ಳು ಸಹಿ ಮಾಡಿಕೊಂಡು ಉಳಿದ ಜಮೀನನ್ನು ತಮ್ಮ ಮಕ್ಕಳ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ. ಈ ವಿಷಯ ಇತ್ತೀಚಿಗೆ ಗೊತ್ತಾಗಿ ಮುಟೇಷನ್ ನೋಡಿ ದಿ|| ಸಣ್ಣನಾರಪ್ಪ ಸಲ್ಲಿಸಿರುವ ಅರ್ಜಿಯ ಪ್ರಕಾರ ದಿ|| **ಸಣ್ಣನಾರಪ್ಪ ಬಿನ್ ಲೇಟ್ ಬಸಪ್ಪ ನಮ್ಮ ಚಿಕ್ಕಪ್ಪನೇ ಅಲ್ಲ** ಎಂಬುದು ಗೊತ್ತಾಗಿರುತ್ತದೆ. **1980-81** ರಿಂದ ಇಲ್ಲಿಯವರೆಗೂ ನಮ್ಮ ಚಿಕ್ಕಪ್ಪನೆಂದು ನಂಬಿಕೊಂಡು ಬಂದಿರುತ್ತೇವೆ. ಈಗ ನಮ್ಮ ತಂದೆ ಆಸ್ತಿಯಲ್ಲಿ ಪಾಲು ಪಡೆದು ಮೋಸ ಮಾಡಿರುವ ಸಂಗತಿ ಗೊತ್ತಾಗಿ ದಿ|| **ಸಣ್ಣನಾರಪ್ಪ** ನವರ ಮಕ್ಕಳಾದ **ಲೇಟ್ ಟಿ.ನಾಗರಾಜಪ್ಪ** ಇವರು ಮೃತರಾದ ನಂತರ ತಮ್ಮ ಮಕ್ಕಳಾದ **ಶ್ರೀಮತಿ ವೀಣಾ ಟಿ.ಎನ್ ಮತ್ತು ನಿರಂಜನ್ ಟಿ.ಎನ್.** ಇವರು ತಮ್ಮ ಹೆಸರಿಗೆ ಆಸ್ತಿ ವರ್ಗಾವಣೆ ಮಾಡಿ ನಿವೇಶನಗಳನ್ನಾಗಿ ಪರಿವರ್ತಿಸಿ, ಮಾರಾಟ ಮಾಡಲು ಇವರುಗಳು ಮೇಲ್ಕಂಡ ಸೊತ್ತಿಗೆ ಸಂಬಂಧಿಸಿದಂತೆ, ನನ್ನ ಕಕ್ಷಿದಾರರ ಹಕ್ಕು ಮತ್ತು ಹಿತಾಸಕ್ತಿಗೆ ಮೋಸ ಮಾಡುವ ಉದ್ದೇಶದಿಂದ ಮೇಲ್ಕಂಡ ಸರ್ವೆ ನಂಬರಿಗೆ ಜಮೀನಿನಲ್ಲಿ ತಮಗೆ ತಿಳಿದಂತೆ ಪರಿವರ್ತನೆ ಮಾಡಿಕೊಂಡು ವ್ಯವಹಾರ ಮಾಡುವ ಹುನ್ನಾರ ತಿಳಿದು ಬಂದಿರುತ್ತದೆ. ನನ್ನ ಕಕ್ಷಿದಾರರಿಗೆ ಮೇಲ್ಕಂಡ ಸೊತ್ತಿನಲ್ಲಿ ಹಕ್ಕು ಹಿತಾಸಕ್ತಿ ಇರುತ್ತದೆ. **ಶ್ರೀಮತಿ ವೀಣಾ ಮತ್ತು ನಿರಂಜನ** ಸ್ವತಂತ್ರವಾಗಿ ವ್ಯವಹರಿಸಲು ಈ ಷೆಡ್ಯೂಲ್ ಆಸ್ತಿ ಮೇಲೆ ವ್ಯವಹರಿಸಲು ಯಾವುದೇ ಹಿತಾಸಕ್ತಿ ಹೊಂದಿರುವುದಿಲ್ಲ.

ಆದ್ದರಿಂದ ಸಾರ್ವಜನಿಕರು ಮೇಲೆ ಹೇಳಿದ ವ್ಯಕ್ತಿಗಳ ಅಥವಾ ಅವರ ಪ್ರತಿನಿಧಿಗಳ ಜೊತೆ ಮೇಲ್ಕಂಡ ಆಸ್ತಿಯಲ್ಲಿ ಸಂಬಂಧಿಸಿದಂತೆ ಯಾವುದೇ ವ್ಯವಹಾರ, ವಗೈರೆ ಮಾಡಬಾರದಾಗಿ ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಯಾವುದೇ ವ್ಯಕ್ತಿಗಳು ಸೊತ್ತಿಗೆ ಸಂಬಂಧಿಸಿದಂತೆ ಸದರಿಯವರೊಂದಿಗೆ ವ್ಯವಹರಿಸಿದಲ್ಲಿ ಅದಕ್ಕೆ ತಾವುಗಳೇ ಜವಾಬ್ದಾರರು ಆಗಿರುತ್ತೀರಿ. 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ದಾವಣಗೆರೆ ರವರು ಅಸಲು **ದಾವೆ 27/2021**ರಲ್ಲಿ ಈ ಆಸ್ತಿಗೆ ಸಂಪೂರ್ಣ ತಡೆಯಾಜ್ಞೆ (ಇಂಜೆಕ್ಷನ್ ಆರ್ಡರ್) ನೀಡಿರುತ್ತಾರೆ. ಆದ್ದರಿಂದ ಯಾರೂ ಸಹ ಈ ಷೆಡ್ಯೂಲ್ ಆಸ್ತಿ ಮಾರಾಟ, ವಗೈರೆ ಮಾಡಬಾರದೆಂದು ದಿನಾಂಕ 01.02.2021ರಂದು ಆದೇಶ ಮಾಡಿರುತ್ತಾರೆ. ಆದ ಕಾರಣ ಸಾರ್ವಜನಿಕರು ಯಾರು ಕೂಡ ಈ ಎರಡು ಎಕರೆ ಆಸ್ತಿಯಲ್ಲಿ ಯಾವುದೇ ವ್ಯವಹಾರ ಮಾಡಬಾರದಾಗಿ ಮತ್ತು ವ್ಯವಹರಿಸಿ ಲುಕ್ಸಾನು ಹೊಂದಬಾರದೆಂದು ತಿಳಿಸಲಾಗಿದೆ. ಒಂದು ವೇಳೆ ಖರೀದಿ ವ್ಯವಹಾರ ನಡೆಸಿ ಆಸ್ತಿ ತೆಗೆದುಕೊಂಡಲ್ಲಿ ನನ್ನ ಕಕ್ಷಿದಾರರ ಹಕ್ಕಿಗೆ ಹಿಸ್ಸೆಗೆ ಬಾಧಕ ಹಾಗೂ ಬಂಧನಕಾರಿಯಾಗುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

**ದಾವಾ ಓ.ಎಸ್. 27/21 ರಲ್ಲಿ ಷೆಡ್ಯೂಲ್ ಆಸ್ತಿ**

ದಾವಣಗೆರೆ ಜಿಲ್ಲೆ, ತಾ, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ಸರ್ವೆ ನಂ.205/1ಪಿರ

ಅಳತೆ: ಎರಡು ಎಕರೆ ಗುಂಟೆ ಇಲ್ಲಾ ಅಸೆಸ್‌ಮೆಂಟ್ ರೂ.1-65 ಇದ್ದು ಇದಕ್ಕೆ ಚಕ್ಕುಬಂದಿ:-

**ಪೂರ್ವಕ್ಕೆ ; ಜಿ.ಮುನಿಯಪ್ಪನವರ ಮಕ್ಕಳ ಆಸ್ತಿ**

**ಪಶ್ಚಿಮಕ್ಕೆ : ಗೌಡಪ್ಪ ಹನುಮಂತಪ್ಪ ಆಸ್ತಿ**

**ಉತ್ತರಕ್ಕೆ: ಚಾನಲ್ ರೋಡ್ ನಂತರ ನಮ್ಮ ಆಸ್ತಿ ಆದರಾಚೆ ಗೌಡಪ್ಪ ಬಸವರಾಜಪ್ಪ ಮತ್ತು ಹೆಚ್.ಆರ್.ಲಿಂಗರಾಜ ರವರ ಆಸ್ತಿಗಳು ದಕ್ಷಿಣಕ್ಕೆ : ಕೊಂಡಜ್ಜಿ ಲೇಟ್ ರುದ್ರಪ್ಪ ಮತ್ತು ಲೇಟ್ ಶೇಖರಪ್ಪ ಇವರ ಆಸ್ತಿ**

**ಕಕ್ಷಿದಾರರ ಸಹಿ/-**
**ಶ್ರೀಮತಿ ಪ್ರೇಮಮ್ಮ ಯಾನೆ ಪ್ರೇಮಲೀಲಾ**

**ಸಿ. ಅಜಯ್,** ನ್ಯಾಯವಾದಿಗಳು
ಮಹೇಶ ಕಾಂಪ್ಲೆಕ್ಸ್, ಪೂಜಾ ಹೋಟೆಲ್
ಪಕ್ಕ ಹಳೇ ಪಿ.ಬಿ.ರಸ್ತೆ, ದಾವಣಗೆರೆ.
**ಮೊ: 97430 19896**

# ಸೂರಗೊಂಡನಕೊಪ್ಪದಲ್ಲಿ 13 ರಿಂದ ಸಂತ ಸೇವಾಲಾಲ್ ಜಯಂತಿ

## ಪೂರ್ವಭಾವಿ ಸಭೆ ನಡೆಸಿದ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಕುಡಚಿ ಕ್ಷೇತ್ರದ ಶಾಸಕ ಪಿ. ರಾಜೀವ್



ದಾವಣಗೆರೆ, ಫೆ.7- ಸಂತ ಸೇವಾಲಾಲ್ ಅವರ 282 ನೇ ಜಯಂತಿ ಉತ್ಸವವನ್ನು ಕೋವಿಡ್ ಹಿನ್ನೆಲೆಯಲ್ಲಿ ಸರಳ ಹಾಗೂ ಅರ್ಥಪೂರ್ಣವಾಗಿ ಇದೇ ದಿನಾಂಕ 13 ರಿಂದ 15 ರವರೆಗೆ ಮೂರು ದಿನಗಳ ಕಾಲ ನ್ಯಾಮತಿ ತಾಲ್ಲೂಕು ಸೂರಗೊಂಡನಕೊಪ್ಪದಲ್ಲಿ ಆಚರಿಸಲಾಗುತ್ತಿದ್ದು, ಆಯಾ ಇಲಾಖೆ ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮನ್ವಯದೊಂದಿಗೆ ಅಚ್ಚುಕಟ್ಟಾಗಿ ನಿರ್ವಹಿಸಿ ಉತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಕುಡಚಿ ಕ್ಷೇತ್ರದ ಶಾಸಕ ಪಿ. ರಾಜೀವ್ ಸೂಚನೆ ನೀಡಿದರು.

ಸೂರಗೊಂಡನಕೊಪ್ಪದ ಸಂತ ಸೇವಾಲಾಲ್ ಕ್ಷೇತ್ರದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಸಂತ ಸೇವಾಲಾಲ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಂತ ಸೇವಾಲಾಲ್ ಅವರ ಜಯಂತಿ ಉತ್ಸವವನ್ನು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಸಂತ ಸೇವಾಲಾಲ್ ಕ್ಷೇತ್ರಾಭಿವೃದ್ಧಿ ಮತ್ತು ನಿರ್ವಹಣಾ ಪ್ರತಿಷ್ಠಾನ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಯಂತ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಉತ್ಸವದಲ್ಲಿ ಮುಖ್ಯಮಂತ್ರಿಗಳು ಆಗಮಿಸಲಿದ್ದು, ಇದಕ್ಕಾಗಿ ಅಗತ್ಯ ಹೆಲಿಪ್ಯಾಡ್ ನಿರ್ಮಾಣ ಆಗಬೇಕು. ಕ್ಷೇತ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ದುರಸ್ತಿ ಕಾರ್ಯ ಆಗಬೇಕು. ನಾಡಿನ ಹಲವು ಭಾಗಗಳಿಂದ ಕ್ಷೇತ್ರಕ್ಕೆ ಭಕ್ತಾದಿಗಳು ಆಗಮಿಸುವ ನಿರೀಕ್ಷೆಯಿದೆ. ಉತ್ಸವ ದಿನಗಳಂದು ಹೊನ್ನಾಳಿ, ಹರಿಹರ, ಶಿವಮೊಗ್ಗ, ಶಿಕಾರಿಪುರ, ದಾವಣಗೆರೆ, ಸವಳಂಗ ಮುಂತಾದ ಕಡೆಗಳಿಂದ ಕೆಎಸ್‌ಆರ್‌ಟಿಸಿಯವರು ವಿಶೇಷ ಬಸ್ ವ್ಯವಸ್ಥೆ ಮಾಡಬೇಕು ಎಂದರು.

ಜಾತ್ರೆಯ ಅವಧಿಯಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಬೆಸ್ಕಾಂ ಕ್ರಮ ವಹಿಸಬೇಕು. ಹೆಚ್ಚು ಜನ ಸೇರುವುದರಿಂದ ಪರಿಸರ ಸ್ವಚ್ಛತೆ ಕಾಯ್ದುಕೊಳ್ಳಲು ನಿರ್ಮಿತಿ ಕೇಂದ್ರದಿಂದ ತಾತ್ಕಾಲಿಕ ಶೌಚಾಲಯ, ಮೊಬೈಲ್ ಟಾಯ್ಲೆಟ್ ವ್ಯವಸ್ಥೆ ಮಾಡಬೇಕು. ಕ್ಷೇತ್ರದಲ್ಲಿ ಸ್ವಚ್ಛತೆಗಾಗಿಯೇ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಬೇಕು. ವಾಹನಗಳ ಪಾರ್ಕಿಂಗ್ ವ್ಯವಸ್ಥೆಗೆ ಸ್ಥಳ ಗುರುತಿಸಿ ಸಿದ್ಧಪಡಿಸಬೇಕು. ಸಮರ್ಪಕ ಕುಡಿಯುವ ನೀರು ಪೂರೈಕೆಗಾಗಿ ಟ್ಯಾಂಕರ್‌ಗಳನ್ನು ಒದಗಿಸಬೇಕು ಎಂದು ರಾಜೀವ್ ತಿಳಿಸಿದರು.

ಮಾಲಾಧಾರಿಗಳಿಗೆ ದಾವಣಗೆರೆ, ಶಿಕಾರಿಪುರ, ಸವಳಂಗ ಸೇರಿದಂತೆ ಅಗತ್ಯ ಇರುವೆಡೆ ವಿಶ್ರಾಂತಿ ತಾಣ ನಿರ್ಮಿಸಿ, ಅಲ್ಲಿ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಬೇಕು. ಮಾಲಾಧಾರಿಗಳಿಗೆ ವಿತರಿಸುವ ಸಲುವಾಗಿ ಕೆಎಂಎಫ್‌ನಿಂದ 15 ಸಾವಿರ ಮಜ್ಜಿಗೆ ಪಾಕೆಟ್ ಖರೀದಿಸಲು ನಿರ್ಧರಿಸಲಾಗಿದೆ. ಫೆ. 13 ರಿಂದ 15 ರವರೆಗೂ ಕ್ಷೇತ್ರದಲ್ಲಿ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದ್ದು, ಆಹಾರದ ಗುಣಮಟ್ಟ ಪರಿಶೀಲನೆ ಕಾರ್ಯಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ನಿಯೋಜಿಸುವಂತೆ ರಾಜೀವ್ ಸೂಚಿಸಿದರು.

ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಡಿವೈಎಸ್‌ಪಿ ಪ್ರಶಾಂತ್, ಸಂತ ಸೇವಾಲಾಲ್ ಮಹಾಮಠ ಸಮಿತಿ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯಕ್ ಮಾತನಾಡಿದರು.

ಸಭೆಯಲ್ಲಿ ಜಿ.ಪಂ. ಸದಸ್ಯ ಸುರೇಂದ್ರನಾಯ್ಕ, ತಾ.ಪಂ. ಸದಸ್ಯ ಪೀರ್ಯಾನಾಯ್ಕ, ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕಿ ಸುನಿತಾ ಬಾಯಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ರೇಷ್ಮಾ ಕೌಸರ್, ನ್ಯಾಮತಿ ತಹಶೀಲ್ದಾರ್ ತನುಜಾ, ಹೊನ್ನಾಳಿ ತಹಶೀಲ್ದಾರ್ ಬಸನಗೌಡರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.

# 2020 ರೈತ ಕಾಯ್ದೆ ವಿರೋಧಿಸಿ ಕೂಡ್ಲಿಗಿ ರೈತ ಸಂಘಟನೆಯಿಂದ ಹೆದ್ದಾರಿ ಬಂದ್




ಕೂಡ್ಲಿಗಿ, ಫೆ. 7- ರೈತರ, ಕಾರ್ಮಿಕರ, ಎಪಿಎಂಸಿ ಭೂ ಸುಧಾರಣಾ ವಿದ್ಯುತ್ ಸೇರಿದಂತೆ ಇತರೆ 2020ರ ತಿದ್ದುಪಡಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕು ಎಂಬ ನಿಟ್ಟಿನಲ್ಲಿ ದೆಹಲಿ ಗಡಿಭಾಗದಲ್ಲಿ ರೈತರ ಪ್ರತಿಭಟನೆ ಬೆಂಬಲಿಸಿ, ಕೂಡ್ಲಿಗಿಯಲ್ಲಿ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ, ಸಿಐಟಿಯು ಮತ್ತು ಕಾಂಗ್ರೆಸ್ ಕಾರ್ಯಕರ್ತರಿಂದ ಕೂಡ್ಲಿಗಿ ಹೊರ ವಲಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಪ್ರತಿಭಟಿಸಲಾಯಿತು.

ಪಟ್ಟಣದ ಮಹಾತ್ಮ ಗಾಂಧೀಜಿ ಪವಿತ್ರ ಚಿತಾಭಸ್ಮ ಹುತಾತ್ಮರ ಸ್ಮಾರಕದಿಂದ ಹೊರಟ ರೈತ ಸಂಘದ ಪ್ರತಿಭಟನೆ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಮದಕರಿ ವೃತ್ತದ ಮೂಲಕ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಕೇಂದ್ರ ಸರ್ಕಾರದ ನಡೆ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟಿಸಲಾಯಿತು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ದೇವರಮನಿ ಮಹೇಶ್, ಕಲ್ಲಪ್ಪ, ಚನ್ನಪ್ಪ, ಓಬಳೇಶ, ಸಿಐಟಿಯು ನ ಕಾರ್ಮಿಕ ಮುಖಂಡ ವಿರುಪಾಕ್ಷಿ ವಕೀಲರು, ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಗುರುಸಿದ್ದನಗೌಡ್ರು, ಮಹಿಳಾ ರಾಜ್ಯ ಕಾರ್ಯದರ್ಶಿ ಜಿಂಕಲ್ ನಾಗಮಣಿ, ಬಳ್ಳಾರಿ ಜಿಲ್ಲಾ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಬಳ್ಳಾರಿ ಜಿಲ್ಲಾ ಯುವ ಪ್ರಧಾನ ಕಾರ್ಯದರ್ಶಿ ಮಂಜು (ಮಯೂರ), ಕಂಪ್ಯೂಟರ್ ರಾಘವೇಂದ್ರ, ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಇತರರು ಭಾಗವಹಿಸಿದ್ದರು.

# ಭಾರತೀಯ ಚಹಾ ತೇಜೋವಧೆಗೆ ಸಂಚು : ಪ್ರಧಾನಿ ನರೇಂದ್ರ ಮೋದಿ

ಢೆಕಿಯಾಜುಲಿ (ಅಸ್ಸಾಂ), ಫೆ. 7 – ಭಾರತೀಯ ಚಹಾ ವನ್ನು ತೇಜೋವಧೆಗೊಳಿಸುವ ಅಂತರರಾಷ್ಟ್ರೀಯ ಸಂಚು ನಡೆಯುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ದೇಶದ ಪ್ರಮುಖ ಚಹಾ ಉತ್ಪಾದನಾ ರಾಜ್ಯವಾದ ಅಸ್ಸಾಂಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ರಾಜ್ಯ ಹೆದ್ದಾರಿಗಳನ್ನು ಉನ್ನತೀಕರಿಸುವ ಹಾಗೂ ಎರಡು ವೈದ್ಯಕೀಯ ಕಾಲೇಜುಗಳಿಗೆ ಶಿಲಾನ್ಯಾಸ ನೆರವೇರಿಸುವ 'ಅಸ್ಸಾಂ ಮಾಲಾ' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಅಸ್ಸಾಂನ ಚಹಾ ತೋಟದ ಕಾರ್ಮಿಕರ ಪ್ರಗತಿಯೊಂದಿಗೆ ಅಸ್ಸಾಂ ಪ್ರಗತಿ ಜೋಡಣೆಯಾಗಿದೆ. ಆದರೆ, ದೇಶದ ಚಹಾ ವನ್ನು ತೇಜೋವಧೆ ಮಾಡುವ ಸಂಚಿನ ದಾಳಿಗಳು ಬೆಳಕಿಗೆ ಬಂದಿವೆ. ಇದಕ್ಕೆ ಅಸ್ಸಾಂನಿಂದ ತಕ್ಕ ಉತ್ತರ ಸಿಗುವುದೆಂಬುದು ನನಗೆ ಖಚಿತವಾಗಿದೆ ಎಂದು ಹೇಳಿದ್ದಾರೆ.

ಅಸ್ಸಾಂನ ಯಾವುದೇ ಚಹಾ ಕಾರ್ಮಿಕ ಈ ದಾಳಿಯನ್ನು ಸಹಿಸುವುದಿಲ್ಲ. ಸಂಚು ನಡೆಸುವ ಸ್ವಹಿತಾಸಕ್ತರಿಗಿಂತ ಚಹಾ ಕಾರ್ಮಿಕರು ಬಲವಾಗಿದ್ದು ಅವರು ಗೆಲ್ಲಲಿದ್ದಾರೆ ಎಂದು ಮೋದಿ ಹೇಳಿದ್ದಾರೆ.

ಸ್ವೀಡನ್‌ನ ಯುವ ಪರಿಸರ ಕಾರ್ಯಕರ್ತೆ ಗ್ರೆಟಾ ಥನ್‌ಬರ್ಗ್ ಅವರು ಇತ್ತೀಚೆಗೆ ರೈತರ ಹೋರಾಟಕ್ಕೆ ಸಂಬಂಧಿಸಿದಂತೆ ವಿವಾದಿತ ಟೂಲ್‌ಕಿಟ್ ಬಿಡುಗಡೆ ಮಾಡಿದ್ದರು. ಟ್ವೀಟ್ ಮೂಲಕ ಟೂಲ್‌ಕಿಟ್ ಬಿಡುಗಡೆ ಮಾಡಿದ್ದ ಅವರು, ನಂತರ ಅದನ್ನು ಡಿಲೀಟ್ ಮಾಡಿದ್ದರು.

ಭಾರತದ ಯೋಗ ಹಾಗೂ ಚಹಾಗೆ ಅಡ್ಡಿಪಡಿಸುವ ಮೂಲಕ ತೇಜೋವಧೆ ಮಾಡಬೇಕೆಂದು ಟೂಲ್‌ಕಿಟ್‌ನಲ್ಲಿ ಕರೆ ನೀಡಲಾಗಿತ್ತು. ಭಾರತೀಯ ಚಹಾ ಉತ್ಪಾದನೆಯಲ್ಲಿ ಅತಿಯಾದ ಕೀಟನಾಶಕ ಬಳಸಲಾಗುತ್ತದೆ ಎಂದು ಸರ್ಕಾರೇತರ ಸಂಘಟನೆ ಗ್ರೀನ್‌ಪೀಸ್ ಕೆಲ ವರ್ಷಗಳ ಹಿಂದೆ ಹೇಳಿತ್ತು.

# ಜೀರಿಗೆಯ ಮಹಿಮೆ



ಜೀರಿಗೆ ಎಂದು
ಜೀರದಿರಣ್ಣ
ಜೀರಿಗೆ ಶಕ್ತಿಯ
ಅರಿಯಣ್ಣ
ಜರಿಯದೆ ಅಂತಃಶಕ್ತಿಯ ಅರಿತು
ಪರಿಪರಿ ಅಡಿಗೆಲಿ ಬಳಸಣ್ಣ

ಜೀರಣವಾಗಿಸೊ ಜೀರಿಗೆ ಚೆಂದ
ಪರಮ ಸ್ವಾದಕೆ ಅದು ಬದ್ಧ
ನೀರಲಿ ಕುದಿಸಿದ ಕಷಾಯದಿಂದ
ಸರಿಯಾಗುವುದು ಹೊಟ್ಟೆ ಬಾಧೆ

ಮಸಾಲ ಡಬ್ಬಿಲಿ ಘಮ ಘಮಿಸುತ್ತ
ರಸಮಯ ಸಾರಿಗೆ ಸೇರುತ್ತ
ಕುಸುರಿಕಾಳಿನ ಒಳಗೆ ಇರುತ
ಹಸುಳೆಯರಿಗೆ ಪ್ರಿಯವಾಗುತ

ಮೆಣಸಿನ ಜೊತೆಯಲಿ ಪುಡಿಯಾಗುತ್ತ
ಸಣ್ಣಗೆ ಅಕ್ಕಿ ರೊಟ್ಟಿಲಿ ಸೇರುತ
ಎಣ್ಣೆಯೊಳಗೆ ಪಟ ಪಟ ಸಿಡಿಯುತ್ತ
ಬಣ್ಣದ ಪೆಪ್ಪರಮೆಂಟು ಆಗುತ

ಅವರೇಕಾಳನು ಜೀರ್ಣ ಮಾಡುತ
ಅವರೇ ಉಪ್ಪಿಟ್ಟು ರೊಟ್ಟಿಲಿ ಇರುತ
ಸುವಾಸನೆ ಆರೋಗ್ಯ ಶಕ್ತಿ ನೀಡುತ
ದೇವ ಸಿರಿಹರಿ ಸೃಷ್ಟಿ ಹೊಳೆಯುತ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

# ರಾಮ ಮಂದಿರಕ್ಕೆ ಕ್ರಿಶ್ಚಿಯನ್ ಸಮುದಾಯದಿಂದ ಕೋಟಿ ದೇಣಿಗೆ

ಬೆಂಗಳೂರು, ಫೆ. 7 – ಕ್ರಿಶ್ಚಿಯನ್ ಸಮುದಾಯದ ಸದಸ್ಯರು ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕೆ ಕೋಟಿ ರೂ. ಗಳಿಗೂ ಹೆಚ್ಚಿನ ದೇಣಿಗೆ ನೀಡಿದ್ದಾರೆ ಎಂದು ಉಪ ಮುಖ್ಯಮಂತ್ರಿ ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಕ್ರಿಶ್ಚಿಯನ್ ಸಮುದಾಯದ ಗುಂಪೊಂದು ನಾರಾಯಣ್ ಅವರನ್ನು ಭೇಟಿ ಮಾಡಿ ನಿಧಿ ಸಮರ್ಪಣಾ ಅಭಿಯಾನಕ್ಕೆ ದೇಣಿಗೆ ನೀಡಿದ್ದಾರೆ. ಕ್ರಿಶ್ಚಿಯನ್ ಸಮುದಾಯದ ಉದ್ಯಮಿಗಳು, ಶಿಕ್ಷಣ ವಲಯದವರು, ಅನಿವಾಸಿ ಭಾರತೀಯರು, ಸಮಾಜ ಸೇವಾ ಕಾರ್ಯಕರ್ತರು ಹಾಗೂ ಮುಖಂಡರು ಸಚಿವರಿಗೆ ದೇಣಿಗೆ ನೀಡುವ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಉಪಸ್ಥಿತರಿದ್ದವರ ಪರವಾಗಿ ಮಾತನಾಡಿರುವ ಉದ್ಯಮಿ ರೊನಾಲ್ಡ್ ಕೊಲ್ಯಾಸೋ, ದೇಶಕ್ಕಾಗಿ ಹಾಗೂ ಸಾಮಾಜಿಕ ಸಾಮರಸ್ಯಕ್ಕಾಗಿ ಕ್ರಿಶ್ಚಿಯನ್ ಸಮುದಾಯ ಸದಾ ಸ್ಪಂದಿಸುತ್ತಾ ಬಂದಿದೆ ಎಂದರು. ರಾಜ್ಯದಲ್ಲಿ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಸ್ಥಾಪನೆ ಹಾಗೂ ಅದಕ್ಕಾಗಿ 200 ಕೋಟಿ ರೂ.ಗಳ ಅನುದಾನ ನೀಡಿರುವುದಕ್ಕೆ ಕೊಲ್ಯಾಸೋ ಇದೇ ಸಂದರ್ಭದಲ್ಲಿ ಧನ್ಯವಾದ ಸಲ್ಲಿಸಿದ್ದಾರೆ.

# ಪ್ರಾಂತೀಯ ಭಾಷೆಯಲ್ಲಿ ಶಿಕ್ಷಣ : ಪ್ರಧಾನಿ ಆಶಯ

**(1ನೇ ಪುಟದಿಂದ)** ಹಳ್ಳಿಗಳಲ್ಲಿ ಹಾಗೂ ದುರ್ಗಮ ಪ್ರದೇಶಗಳಲ್ಲಿ ಪ್ರತಿಭೆಗಳ ಕೊರತೆ ಇಲ್ಲ. ಪ್ರತಿಯೊಂದು ರಾಜ್ಯದಲ್ಲೂ ಸ್ಥಳೀಯ ಭಾಷೆಯಲ್ಲಿ ಕಲಿಸುವ ಒಂದು ವೈದ್ಯಕೀಯ ಕಾಲೇಜು ಹಾಗೂ ಒಂದು ತಾಂತ್ರಿಕ ಶಿಕ್ಷಣ ಸಂಸ್ಥೆ ಇರಬೇಕು ಎಂಬ ಕನಸು ನನ್ನದಾಗಿದೆ ಎಂದಿರುವ ಪ್ರಧಾನಿ, ವಿಧಾನಸಭಾ ಚುನಾವಣೆಯ ನಂತರ ಅಸ್ಸಾಂನಲ್ಲಿ ಇಂಥದೇ ಘಟಕ ಸ್ಥಾಪಿಸುವ ಭರವಸೆ ನೀಡಿದ್ದಾರೆ. ಇದರಿಂದಾಗಿ ದುರ್ಗಮ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆಗಳು ಸುಧಾರಿಸಲಿವೆ. ಹೆಚ್ಚು ವೈದ್ಯರು ತಮ್ಮ ಮಾತೃಭಾಷೆಯಲ್ಲಿ ಜನರನ್ನು ತಲುಪಲು ಹಾಗೂ ಅವರ ಸಮಸ್ಯೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮೋದಿ ಹೇಳಿದ್ದಾರೆ.

# ಎಸ್‌ಟಿ ಹೋರಾಟ ಬಿಡೆವು

**(1ನೇ ಪುಟದಿಂದ)** ಜೊತೆ ಇರುವುದಾಗಿ ತಿಳಿಸಿದರು.

ಜೆಡಿಎಸ್ ಮುಖಂಡ ಬಂಡೆಪ್ಪ ಕಾಶಂಪುರ ಮಾತನಾಡಿ, ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ತನಕ ಹೋರಾಟ ನಿರಂತರವಾಗಿ ಮುಂದುವರೆಯಲಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡ ಹೆಚ್.ಎಂ. ರೇವಣ್ಣ ಮಾತನಾಡಿ, ಇದು ಐತಿಹಾಸಿಕ ಹೋರಾಟದ ಆರಂಭ. ಕುರುಬರನ್ನು ಎಸ್‌ಟಿ ಪಟ್ಟಿಗೆ ಸೇರಿಸುವವರೆಗೆ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ಹೊಸದುರ್ಗ ಶಾಖಾಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಮ್ಮ ಹೋರಾಟವನ್ನು ಲಘುವಾಗಿ ತೆಗೆದುಕೊಳ್ಳಬಾರದು. ನಮಗೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ತಿಳಿಸಿದರು.

ಕುರುಬರ ಎಸ್‌ಟಿ ಹೋರಾಟ ಸಮಿತಿಯ ಅಧ್ಯಕ್ಷ ಕೆ.ವಿರೂಪಾಕ್ಷಪ್ಪ ಮಾತನಾಡಿ, ಕುರುಬರ ಸಮನಾಂತರ ಪಂಗಡಗಳನ್ನು ಈಗಾಗಲೇ ದೇಶದ ವಿವಿಧ ರಾಜ್ಯಗಳಲ್ಲಿ ಎಸ್‌ಟಿ ಪಟ್ಟಿಗೆ ಸೇರಿಸಲಾಗಿದೆ. ಅದನ್ನು ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳಿಗೂ ವಿಸ್ತರಿಸಬೇಕು. ಮುಖ್ಯಮಂತ್ರಿ ಇದಕ್ಕೆ ಶಿಫಾರಸ್ಸು ಮಾಡಬೇಕು ಎಂದು ಆಗ್ರಹಿಸಿದರು.

ತೋಟಗಾರಿಕೆ ಸಚಿವ ಆರ್. ಶಂಕರ್ ಮಾತನಾಡಿ, ಶೀಘ್ರ ಕುರುಬರನ್ನು ಎಸ್ ಟಿ ಪಟ್ಟಿಗೆ ಸೇರಿಸಬೇಕು. ಎಸ್ಟಿ ಪಟ್ಟಿಗೆ ಸೇರಿಸಿದರೆ ಕುರುಬರು ಬಿಜೆಪಿ ಪಕ್ಷದೊಂದಿಗೆ ಇರಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ನಮ್ಮ ಸಮುದಾಯದ ಒಬ್ಬರನ್ನು ಮುಖ್ಯಮಂತ್ರಿಯಾಗಿ ಮಾಡಲಾಯಿತು. ಆದರೆ, ಅವರೇ ನಮ್ಮ ಸಮಾವೇಶಕ್ಕೆ ಬಂದಿಲ್ಲ. ಇದರಿಂದ ನಮಗೆ ನೋವಾಗಿದೆ. ಅವರಿಗಾಗಿ ತನು, ಮನ, ಧನ ಅರ್ಪಿಸಲಾಗಿತ್ತು. ಇದು ಯಾವುದೇ ರಾಜಕೀಯ ಅಜೆಂಡಾ ಅಲ್ಲ. ನಮ್ಮದು ಸಮುದಾಯ ಹೋರಾಟ ಎಂದು ಸಿದ್ದರಾಮಯ್ಯ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಸಮಾವೇಶದಲ್ಲಿ ಭಾಗವಹಿಸಲು ಲಕ್ಷಾಂತರ ಸಂಖ್ಯೆಯಲ್ಲಿ ಜನ ಬಂದಿದ್ದರಿಂದ ತುಮಕೂರು ರಸ್ತೆಯಲ್ಲಿ ಜನದಟ್ಟಣೆ ಹೆಚ್ಚಾಗಿ ಕೆಲ ಸಮಯ ಟ್ರಾಫಿಕ್ ಜಾಮ್ ಉಂಟಾಗಿತ್ತು. ಪೊಲೀಸರು ಸಾರ್ವಜನಿಕರು ಬದಲಿ ಮಾರ್ಗಗಳನ್ನು ಬಳಸುವಂತೆ ಸೂಚನೆ ನೀಡಿದ್ದರು.

# ಬಾಲಬಡುಕರು

ಎಲ್ಲೆಲ್ಲೂ ಇರುವರು ಇವರು
ಗೆದ್ದೆತ್ತಿನ ಬಾಲ ಹಿಡಿದು ಮೆರೆಯುವವರು
ಕಳ್ಳದಾರಿಯ ಹಿಡಿದು
ಮಳ್ಳರಂತೆ ನಡೆದುಕೊಳ್ಳುವರು

ನಾಯಕರ ಮುತ್ತಿಕೊಳ್ಳುತಾ
ಮೆಚ್ಚುಗೆಯ ಮಳೆಸುರಿಸುತಾ
ಬಗಲ ಬಳಿ ಅಂಟಿಕೊಂಡಿರುವ
ನೆಂಟರಿಷ್ಟರು
ಎಂಜಲು ಕಾಸಿನಾಸೆಗೆ
ಚಾಮರ ಬೀಸುವರು
ಅಧಿಕಾರದಾಹಿಗಳ ವಿತಂಡವಾದಕೆ
ಹಲ್ಲು ಕಿಸಿಯುವ ಕೋಲೆ ಬಸವರು

ಸ್ವಾರ್ಥ ಜನರ ತಪ್ಪುಗಳ ಎತ್ತಿ ಆಡರು
ಸೆರೆಮನೆಯ ಕಂಡ ಭಂಡ ಜನರ
ಆರತಿ ಎತ್ತಿ ಅಪ್ಪಿಕೊಳ್ಳುವರು
ನೀತಿ ನಿಯಮಗಳು ಹೊತ್ತಿ ಉರಿಯಲು
ಬತ್ತಿಹೊಸೆಯುವರು

ಅವರವರ ಬೇಳೆ ಬೇಯಿಸಿಕೊಳ್ಳಲು
ಅವರಿವರ ಕಾಲು ಒತ್ತುವರು
ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ
ಬಿಟ್ಟಿ ಹೊಗಳಿಕೆಯಾಡುತಾ
ಮಾನಬಿಟ್ಟಿರುವರು.

- ಎಂ.ಎಸ್.ಮಂಜುಳಾ ಮಂಜಪ್ಪ, ದಾವಣಗೆರೆ.

# ಮೇ 9ಕ್ಕೆ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

**ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ ಮತದಾರರಿದ್ದು, 400 ಕ್ಕೂ ಅಧಿಕ ಮತಗಟ್ಟೆಗಳಲ್ಲಿ ಮತದಾನ**

**(1ನೇ ಪುಟದಿಂದ)** ಕಚೇರಿಯಲ್ಲಿ ಪ್ರಕಟಿಸಲಾಗುತ್ತದೆ. ಫೆ.22 ರವರೆಗೆ ಆಕ್ಷೇಪ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ.

ಹೊಸದಾಗಿ ರಚನೆಯಾದ 52 ತಾಲ್ಲೂಕುಗಳಲ್ಲಿಯೂ ಚುನಾವಣೆ ಪ್ರಕ್ರಿಯೆ ನಡೆಸಲಾಗುತ್ತದೆ. ಮತದಾರರ ವಿಳಾಸ ಮತ್ತು ವಿವರಗಳನ್ನು ಸುಲಭವಾಗಿ ಪಡೆದುಕೊಳ್ಳಲು Election kasapa ಮೊಬೈಲ್ ಆಪ್ ಅಭಿವೃದ್ಧಿಪಡಿಸಲಾಗಿದೆ.

ಪರಿಷತ್ತಿನ ವೆಬ್ ಸೈಟ್ www.kasapa.inನಲ್ಲಿಯೂ ವಿವರಗಳು ದೊರೆಯಲಿವೆ. ಮತದಾರರ ಕರಡು ಪಟ್ಟಿಯನ್ನು ಕನ್ನಡ ವರ್ಣಮಾಲೆಯ ಅಕ್ಷರಗಳಿಗೆ ಅನುಗುಣವಾಗಿ ಮುದ್ರಿಸಲಾಗಿದೆ. ಇವು ಪರಿಷತ್ತಿನ ಚುನಾವಣೆ ಇತಿಹಾಸದಲ್ಲಿಯೇ ಮೊದಲ ಪ್ರಯತ್ನ ಎಂದು ಕಸಾಪ ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ ಮತದಾರರಿದ್ದು, 400 ಕ್ಕೂ ಅಧಿಕ ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆ ನಡೆಯಲಿದೆ. ಈ ಪ್ರಕ್ರಿಯೆ ಮುಗಿದ ಬಳಿಕ ಅದೇ ದಿನ ಜಿಲ್ಲಾ ಕಸಾಪ ಚುನಾವಣಾಧಿಕಾರಿಗಳು ಮತಗಳನ್ನು ಎಣಿಕೆ ಮಾಡಿ, ಜಿಲ್ಲಾ ಘಟಕದ ಅಧ್ಯಕ್ಷರ ಚುನಾವಣಾ ಫಲಿತಾಂಶವನ್ನು ಘೋಷಿಸಲಿದ್ದಾರೆ. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸಂಬಂಧಿಸಿದ ಮತದಾನದ ಎಣಿಕೆಯ ಫಲಿತಾಂಶದ ವಿವರವನ್ನು ಜಿಲ್ಲಾ ಚುನಾವಣಾಧಿಕಾರಿಗಳು ಕೇಂದ್ರ ಚುನಾವಣಾಧಿಕಾರಿಗೆ ಕಳುಹಿಸಬೇಕಾಗುತ್ತದೆ ಎಂದು ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಈ ಹಿಂದೆ ಕಸಾಪ ಚುನಾವಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದ ಹಾಗೂ ಪರಿಷತ್ತಿನ ನಿಬಂಧನೆಗಳ ತಿದ್ದುಪಡಿ ಮತ್ತು ಚುನಾವಣಾ ಸಲಹಾ ಸಮಿತಿಯ ಹಾಲಿ ಸದಸ್ಯ ಎಸ್.ಟಿ. ಮೋಹನ್ ರಾಜು ಅವರನ್ನು ವಿಶೇಷ ಚುನಾವಣಾಧಿಕಾರಿಯನ್ನಾಗಿ ನೇಮಿಸಿಕೊಳ್ಳಲಾಗಿದೆ. ಸತತ ಮೂರು ವರ್ಷಗಳು ಪರಿಷತ್ತಿನ ಸದಸ್ಯರಾಗಿರುವವರು ಚುನಾವಣೆಯಲ್ಲಿ ಮತದಾನ ಮಾಡಬಹುದು. 10 ವರ್ಷಗಳ ಹಿಂದಿನಿಂದ ಸದಸ್ಯರಾಗಿರುವವರು ಅಧ್ಯಕ್ಷ ಸ್ಥಾನಕ್ಕೆ, 5 ವರ್ಷಗಳಿಂದ ಸದಸ್ಯರಾಗಿರುವವರು ಜಿಲ್ಲಾ ಮತ್ತು ಗಡಿನಾಡು ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ ಎಂದು ಹೇಳಿದರು.

ಚುನಾವಣೆಗೆ ಅರ್ಹರಾಗಿರುವ ಕರಡು ಮತದಾರರ ಪಟ್ಟಿಯನ್ನು ಫೆ.8ರಂದು ಪರಿಷತ್ತಿನ ಕೇಂದ್ರ ಕಚೇರಿ, ಜಿಲ್ಲಾ ಕೇಂದ್ರಗಳ ತಾಲ್ಲೂಕು ತಹಶೀಲ್ದಾರರ ಕಚೇರಿಗಳಲ್ಲಿ ಪ್ರಕಟಿಸಲಾಗುತ್ತದೆ. ಮತದಾರರ ಪಟ್ಟಿಯ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಫೆ.22 ಕಡೆಯ ದಿನಾಂಕವಾಗಿದೆ. ಕಸಾಪ 8ಎ ಅರ್ಜಿ ನಮೂನೆಗಳಲ್ಲಿ ಅಥವಾ ಮನವಿ ರೂಪದಲ್ಲಿ ಕೇಂದ್ರ ಚುನಾವಣಾಧಿಕಾರಿಗಳು ಅಥವಾ ಎಲ್ಲ ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಸಹಾಯಕ ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕು. ಅಂತಿಮ ಮತದಾರರ ಪಟ್ಟಿಯನ್ನು ಮಾ.25ರಂದು ಪ್ರಕಟಿಸಲಾಗುತ್ತದೆ ಎಂದು ಗಂಗಾಧರಸ್ವಾಮಿ ತಿಳಿಸಿದ್ದಾರೆ.

# 13ಕ್ಕೆ ಕರಾರಸಾ ನಿಗಮದ ನೌಕರರ ಸಹಕಾರಿ ಚುನಾವಣೆ

ದಾವಣಗೆರೆ, ಫೆ.7- ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಪತ್ತಿನ ಸಹಕಾರ ಸಂಘದ ಚುನಾವಣೆಯು ದಿನಾಂಕ 13ರಂದು ಯಮುನಾ ಬಾಯಿ ಶ್ರೀ ನಲ್ಲೂರು ಶಾಂತಾರಾಮ ಸಭಾಭವನದಲ್ಲಿ ನಡೆಯಲಿದೆ.

ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ವಿಭಾಗಗಳಿಗೆ ಆಡಳಿತ ಮಂಡಳಿ ಚುನಾವಣೆಗೆ ಅಧಿಸೂಚನೆ ತಿಳಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ವೆಂಕಟೇಶ್ ರೆಡ್ಡಿ ತಿಳಿಸಿದ್ದಾರೆ.

# ಹೋರಾಟ ನಾಚಿಕೆಗೇಡು

**(1ನೇ ಪುಟದಿಂದ)** ಎಂದು ಕಾಂಗ್ರೆಸ್ ಹೇಳಿದೆ.

ಬೀದಿಯಲ್ಲಿ ಇಷ್ಟೆಲ್ಲಾ ಹೋರಾಟ ನಡೆಸುವ ಈಶ್ವರಪ್ಪ ಹಾಗೂ ಸಚಿವ ಎಂ.ಬಿ.ಟಿ. ನಾಗರಾಜ್, ಸದನದಲ್ಲಿ ಮೀಸಲಾತಿ ಬೇಡಿಕೆಯ ಪ್ರಸ್ತಾಪವನ್ನೇ ಮಾಡಿಲ್ಲ. ಅಲ್ಲಿ ಇವರನ್ನು ಯಾರು ತಡೆದಿದ್ದರು? ಅಧಿಕಾರವಿದ್ದೂ ಬೀದಿಗೆ ಇಳಿದಿದ್ದಾರೆ ಎಂದರೆ ಇವರದ್ದು ನೈಜತೆ ಇಲ್ಲದ ಸಮುದಾಯಕ್ಕೆ ಮಂಕುಬೂದಿ ಎರಚುವ ಬೀದಿ ನಾಟಕ ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸುತ್ತಿದೆ.

ಇನ್ನೊಂದೆಡೆ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು 25 ಸಂಸದರಿದ್ದಾರೆ. ಯಾರನ್ನಾದರೂ ಕರೆದುಕೊಂಡು ಹೋಗಿ ಏನಾದರೂ ಮಾಡಿಕೊಳ್ಳಿ ಎನ್ನುತ್ತಿದ್ದಾರೆ. ಅವರ ಉಡಾಫೆಯ ಮಾತುಗಳು ಕುರುಬ ಎಸ್ಟಿ ಮೀಸಲಾತಿಯ ಬಗ್ಗೆ ನಿಮ್ಮ ನಿರ್ಲಕ್ಷ್ಯ ತೋರಿಸುತ್ತದೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಹೇಳಿದೆ.

ಈಗಾಗಲೇ ಗೊಂಡ, ರಾಜಗೊಂಡ, ಬೆಟ್ಟ ಕುರುಬ ಸಮುದಾಯವನ್ನು ಎಸ್.ಟಿ.ಗೆ ಸೇರಿಸುವ ಪ್ರಸ್ತಾವನೆಯನ್ನು ಹಿಂದಿನ ಸಿದ್ದರಾಮಯ್ಯ ಸರ್ಕಾರವು ಕೇಂದ್ರಕ್ಕೆ ಕಳಿಸಿದೆ. ಈ ಶಿಫಾರಸ್ಸು ಬದಿಗೆ ಸರಿಸಿ ಕುಳಿತಿದ್ದೇಕೆ? ಈ ಬಗ್ಗೆ ಗಮನ ಹರಿಸದೇ ಜನತೆಯ ದಿಕ್ಕು ತಪ್ಪಿಸುವ ನಾಟಕ ನಡೆಯುತ್ತಿದೆ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

# ನೀವೇನಂತೀರಿ ? ?

ತೌಡ್ಕುಟ್ಟಿ ಕಟ್ಟಿದ ಕಟ್ಕತೆಗಳು ಖರೇನಾ
ಮೂಗಿನ್ಯಾರ್ದ ಮೂರ್ಖತನ ಸರೀನಾ
ದಿಟವಾಗ್ಲುಂಟೇ ದಿಕ್ತಪ್ಪಿದ ಧಿಮಾಕಿನ್ಮಾತು
ಸೂರ್ಯಂಗೆ ಸಣ್ತನದ ಸುಣ್ಣ ಎರ್ಚಲೇನ್ಪಂತು
'ಕಾಲೆಳೆಯೋರ್ ಕಾಲ್ನ ಮುರ್ದಿಡುತ್ತೆ ಕಾಲ'
ಅಂತಾನೆ ಕೊಂಕುತಿಮ್ಮ!?

- ಮಹಾಂತೇಶ್.ಬಿ.ನಿಟ್ಟೂರ್, ದಾವಣಗೆರೆ.

# ದಿನದ ಚುಟುಕು

ದುಡ್ಡೇ ದೊಡ್ಡಪ್ಪ ಈ ಜಗದ ಮಹಿಮೆ
ಅದ ಸರಿಸಿ ತೋರು ನಿನ್ನಯ ಹಿರಿಮೆ
ಬರುವುದು ನೋಡು ಹಿಂದೆಯೇ ಗರಿಮೆ
ಸಿಗುವುದು ನಿನಗಾಗ ಭಾರೀ ಒಲುಮೆ!

- ವೀಣಾ ಕೃಷ್ಣಮೂರ್ತಿ


**ಸೈಟ್‌ಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30×50 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30×50 ದಕ್ಷಿಣ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30×40 ಉತ್ತರ.
ಶಾಮನೂರು ಧನ್ಯಕುಮಾರ್ ಮೊ.97415 62589
ಸ್ವಾಮಿ ಏಜೆಂಟ್ ವಿದ್ಯಾನಗರ ಮೊ.97421 44715

**ಕರ್ನಾಟಕ ಗೃಹಮಂಡಳಿ ಸೈಟ್‌ಗಳು ಮಾರಾಟಕ್ಕಿವೆ**
30x40, East, 30x40 west, 30x50 South, 30x50 west, 40x60 East, 30x50 North East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬಂಗ್ಲೆ ಸೈಟು ಮಾರಾಟಕ್ಕೆ**
ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ 91x62 ಉತ್ತರ, 40x60 ದಕ್ಷಿಣ, 80x68 ದಕ್ಷಿಣ, 60x50 ಉತ್ತರ, 80x70 ದಕ್ಷಿಣ, 40x70 ದಕ್ಷಿಣ, 30x90 ಉತ್ತರ, 40x50 ದಕ್ಷಿಣ.
ಬೂಸ್ನೂರ್ ಕಿರಣ್ (ಏಜೆಂಟ್) 98440-63409, 97315-63409
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ)

**ಗುಮಾಸ್ತರು ಬೇಕಾಗಿದ್ದಾರೆ**
ಬೆಳ್ಳಿ - ಬಂಗಾರದ ಅಂಗಡಿಗೆ ಗುಮಾಸ್ತರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
ಸಂಪರ್ಕಿಸಿ: 98444-44772

**ಸೈಟುಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ ಇವೆ**
ಶಿವಪಾರ್ವತಿ ಬಡಾವಣೆಯಲ್ಲಿ, ವಿದ್ಯಾನಗರ, ಆಂಜನೇಯ ಬಡಾವಣೆಯಲ್ಲಿ, ಬಸವೇಶ್ವರ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ**
ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಆಗಿರುವ ಹುಡುಗರು ಕಲೆಕ್ಷನ್ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಅಕೌಂಟೆಂಟ್ ಹುದ್ದೆಗೆ ಬಿ.ಕಾಂ. ಆಗಿರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಸಕ್ತರು ಬಯೋಡೇಟಾ ಮತ್ತು ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ನವೋದಯ್ ಚಿಟ್ ಫಂಡ್ಸ್ C/o ಬಾಲಾಜಿ ಗೋಲ್ಡ್ ಪ್ಯಾಲೇಸ್ ಮಂಡಿಪೇಟೆ, ದಾವಣಗೆರೆ.

**ಮನೆಗಳು ಮಾರಾಟಕ್ಕಿವೆ**
1) 30x40 North ವಿದ್ಯಾನಗರ ಹಿಂಭಾಗದ ವಿನಾಯಕ ಬಡಾವಣೆಯಲ್ಲಿ 2) 40x60 North ಮನೆ ಕುವೆಂಪು ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಸೈಟು ಮಾರಾಟಕ್ಕೆ**
ಜೆ.ಹೆಚ್.ಪಟೇಲ್ ಮತ್ತು ಪೊಲೀಸ್ ಲೇಔಟ್ ಬಾಡಾ ಕ್ರಾಸ್, ಬೈಪಾಸ್
ಜೆ.ಹೆಚ್. ಪಟೇಲ್ : 40x60 ದಕ್ಷಿಣ, 30x50 ಉತ್ತರ, 40x60 ಪೂರ್ವ,40x60 ದಕ್ಷಿಣ.
ಪೊಲೀಸ್ ಲೇಔಟ್ : 30x40 ಪೂರ್ವ, 30x40 ಉತ್ತರ.
ಬೂಸ್ನೂರ್ ಕಿರಣ್, 98440-63409
(ಸೈಟು, ಮನೆ ಖರೀದಿಗೆ ಬೇಕಾದರೆ ತಿಳಿಸಿ)

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

**ಮಿಶನ್ ಹೆಲ್ಪರ್ ಬೇಕಾಗಿದ್ದಾರೆ**
ಪ್ರಿಂಟಿಂಗ್ ಪ್ರೆಸ್‌ನಲ್ಲಿ ರಾತ್ರಿ ವೇಳೆ (ರಾತ್ರಿ 9 ರಿಂದ 1 ಗಂಟೆ) ಕೆಲಸ ಮಾಡಲು ಹೆಲ್ಪರ್‌ಗಳು ಬೇಕಾಗಿದ್ದಾರೆ. ಯುವಕರಿಗೆ ಆದ್ಯತೆ. ಸಂಪರ್ಕಿಸಿ.
9844060736

**ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ**
(ಆಫೀಸ್ ಮತ್ತು ವಿದ್ಯಾರ್ಥಿಗಳಿಗೆ)
63633 12234

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಕಾರ್ ಡ್ರೈವರ್. ವೇತನ 9000 ದಿಂದ 10,000/- ಮತ್ತು ವಾಟರ್ ಪ್ಯೂರಿಫೈರ್ ಸರ್ವಿಸ್ ಸೆಂಟರ್‌ನಲ್ಲಿ ಹೆಲ್ಪರ್ ಬೇಕಾಗಿದ್ದಾರೆ. ವೇತನ 9000/-
99642 22603, 78992 96668

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ.ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಕಲಿಯುವವರಿಗೂ ಅವಕಾಶವುಂಟು.
94838 62779

**FAILED & REGULAR COACHING**
for SSLC & IInd PUC
PCMB, Commerce, Arts
SINCHANA ACADEMY
Near SBI ATM, Ram & co Circle, Davangere.
85532 78258 90195 80600

**ಸೈಟು ಮಾರಾಟಕ್ಕಿದೆ**
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್‌ನಲ್ಲಿ ಮೊದಲನೇ ಮಹಡಿಯಲ್ಲಿ 2 BHK ಪೂರ್ವ ದಿಕ್ಕಿನ ಮನೆ ಬಾಡಿಗೆಗೆ ಇದೆ.
90085 26334

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದ ಬಸ್‌ಸ್ಟಾಂಡ್‌ನ ಹತ್ತಿರ, ಭಾರತ್ ಆಯಿಲ್ ಮಿಲ್ ಕಾಂಪೌಂಡ್ ನಲ್ಲಿ SM ಲಾಡ್ಜ್‌ನ ಹತ್ತಿರ ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ.
ಸಂಪರ್ಕಿಸಿ: 98444 33504

**ಶ್ರೀ ರಾಜರಾಜೇಶ್ವರಿ ಟೂರ್ಸ್ ಮತ್ತು ಯಾತ್ರೆ**
(ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ)
ವಿಮಾನ ಮತ್ತು ರೈಲಿನಲ್ಲಿ 10 ದಿನಗಳ ಸುಖಕರ ಪ್ರವಾಸ ಶಿಮ್ಲಾ, ಕುಲುಮನಾಲಿ, ಮಣಿಕರಣ್, ನೈನಾದೇವಿ, ಜ್ವಾಲಾಮುಖಿ, ಚಾಮುಂಡಾದೇವಿ, ವೈಷ್ಣೋದೇವಿ, ಚಂಡೀಘಡ್, ಅಮೃತಸರ್, ವಾಘಾ ಬಾರ್ಡರ್ ದೆಹಲಿ, ಕೇವಲ 22,000 ರೂಗಳು. ಕೆಲವೇ ಸೀಟು ಬಾಕಿ ಇದೆ.
ಫೋನ್ ನಂ. 97438 95346
ಹೊರಡುವ ದಿನಾಂಕ 19.02.2021 ರಂದು

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ನಮ್ಮ ಅಂಗಡಿಯಲ್ಲಿ ಅಕೌಂಟ್ಸ್ ಬರೆಯಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. Tally ಕಲಿತಿರಬೇಕು ಹಾಗೂ ಅಂಗಡಿಯಲ್ಲಿ ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಸೈಟ್ ಮಾರಾಟಕ್ಕಿದೆ**
30x40 ಉತ್ತರ ದಿಕ್ಕು, ಹೈಟೆಕ್ ಹಾಸ್ಪಿಟಲ್ ರೋಡ್, ನಿಮ್ಮ ಸೈಟ್‌ನಲ್ಲಿ ಚದರ ಲೆಕ್ಕದಲ್ಲಿ ಮನೆ ಕಟ್ಟಿ ಕೊಡಲಾಗುವುದು.
87224 07999

**ಬಾಡಿಗೆಗೆ / ಲೀಜ್‌ಗೆ**
ಶ್ರೀ ಸಿದ್ದೇಶ್ವರ ರೈಸ್ ಮಿಲ್, ಆರನೇ ಕಲ್ಲು ಹದಡಿ ರಸ್ತೆಯಲ್ಲಿ ಗೋಡೌನ್‌ಗಳು ಬಾಡಿಗೆಗೆ ಅಥವಾ ಲೀಸ್‌ಗೆ 4200sqft + 4300 sqft = 8500 sqft
ವಿಚಾರಿಸಿ: V.C. ಶಿವಮೂರ್ತಿ
86604 30869

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davangere.
77603 16576
90080 55813

**ಶ್ರೀ ರಾಜರಾಜೇಶ್ವರಿ ಟೂರ್ಸ್ ಮತ್ತು ಯಾತ್ರೆ**
(ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ)
AC ಟ್ರೈನ್‌ನಲ್ಲಿ 11 ದಿನಗಳ ಪ್ರವಾಸ ಪುರಿ ಜಗನ್ನಾಥ, ಭುವನೇಶ್ವರ, ಕೊನಾರ್ಕ್ ಸೂರ್ಯ ಟೆಂಪಲ್, ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್ ಅಯೋಧ್ಯೆ ಹೊರಡುವ ದಿನಾಂಕ 13.03.2021. ಫೋನ್ ನಂ:
97438 95346 97396 18243

**ಬೆಳ್ಳಿ ಫೋಟೋಗಳು ಸಿಗುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಉಡುಗೊರೆಯಾಗಿ ಕೊಡಲು ಅನುಕೂಲ ದರದಲ್ಲಿ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ ಸರಸ್ವತಿ, ಶ್ರೀ ಕನ್ನಿಕಾ ಪರಮೇಶ್ವರಿದೇವಿ, ಸತ್ಯನಾರಾಯಣಸ್ವಾಮಿ, ಮಂಜುನಾಥ, ಶಿವ - ಪಾರ್ವತಿ, ರಾಘವೇಂದ್ರ, ಆಂಜನೇಯ ಮುಂತಾದ ದೇವರ ಫೋಟೋಗಳು ಲಭ್ಯ. ಬೆಳ್ಳಿಯ ಡಿನ್ನರ್ ಸೆಟ್, ಬೆಳ್ಳಿಯ ಬಾಳೆಕಂಬ, 3ಡಿ ಕೊಡಪಾನ, ಡಿಜೈನ್ ತಟ್ಟೆಗಳು, ಬೆಳ್ಳಿಯ ಹೂಬುಟ್ಟಿ ಮತ್ತು ಕಾಮಧೇನು, ಕಲ್ಪವೃಕ್ಷ ನಮ್ಮಲ್ಲಿ ದೊರೆಯುತ್ತವೆ. ಹೊಸದಾಗಿ ಅಂಗಡಿ ಮತ್ತು ಫ್ಯಾಕ್ಟರಿ ಪ್ರಾರಂಭಿಸಲು ಮಾಡುವ ಪೂಜೆ ವೈಟ್ ಮೆಟಲ್‌ನ ಸರ್ವಾಲಂಕಾರದ ದೇವಿ ಫೋಟೋಗಳು ದೊರೆಯುತ್ತವೆ.
ಬಾಲಾಜಿ ಗೋಲ್ಡ್ ಪ್ಯಾಲೇಸ್
ಮಂಡಿಪೇಟೆ, ದಾವಣಗೆರೆ.
08192-257357, 250036

**SBI-CSP**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account open) with ATM old
B.S. ಚನ್ನಬಸಪ್ಪ & ಸನ್ಸ್ ಹಿಂಭಾಗ # 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005
93436 22166

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಮನೆ ಬಾಡಿಗೆಗೆ ಇದೆ**
#1928/63A, ಎಸ್.ಎಸ್. ಲೇಔಟ್, ಎ ಬ್ಲಾಕ್, ಎಂ.ಬಿ.ಎ. ಕಾಲೇಜ್ ಹತ್ತಿರ, 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
70227 94155

**ಬೇಕಾಗಿದ್ದಾರೆ**
ಹೋಂ ನರ್ಸಿಂಗ್‌ಗೆ ಮಹಿಳಾ ಅಸಿಸ್ಟೆಂಟ್ ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ: 80736 95539

**Coding and decoding classes**
2nd std to 5th std
Bruit abacus and vedic maths
Mob: 96201 53806

**SHOPS FOR RENT**
(with Wash Room Facility)
N.R. Road, Davanagere.
Contact 94483 69523

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**SPACE AVAILABLE ON RENT**
1st & 2nd Floor - 1650 sqft, Ground Floor - 220 Sqft
Suitable for Corporate office, Stockist, Distributors, Poly clinic, ext lift, Facility Available
171/4AB, "Shastry Bhavan" 3rd Main, P.J. Extn, Near Chetana Tower. Contact
98807 65683
99450 35442

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
(ಕೊನೆಯ ದಿನಾಂಕ : 10.2.2021)
90195 80600, 86601 95955

**ATTENTION**
WORK FROM HOME PART TIME/ FULL TIME-LOW COST STARATUP BE YOUR OWN BOSS!!
Call: 79751 41486

**Vacant space for Rent or Lease**
Site No 14,15,16 near shiradi sai Baba Temple opposite Siri Sai Hostel, jayanagara Badavane, Davanagere.
Rajashekar - 94489 66264
Venkatesh - 82774 81291
Shivanandppa - 63615 67680

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**JOBS**
MCS ACADEMY
Training & Placement Cell
98444 92888

## ಶ್ರೀರಾಮ ಮಂದಿರ ನಿರ್ಮಾಣಕ್ಕೆ ಕಣ್ವಕುಪ್ಪಿ ಶ್ರೀಗಳಿಂದ ದೇಣಿಗೆ



ಜಗಳೂರು, ಫೆ.7- ಅಯೋಧ್ಯೆಯ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಕಣ್ವಕುಪ್ಪಿ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ಶ್ರೀರಾಮ ನಿಧಿ ಸಮರ್ಪಣಾ ಅಭಿಯಾನಕ್ಕೆ ಭಾನುವಾರ ದೇಣಿಗೆ ನೀಡಿದ್ದಾರೆ. ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್.ಶಿವಯೋಗಿಸ್ವಾಮಿ, ಆರ್.ಎಸ್.ಎಸ್. ಸಾಮರಸ್ಯ ವೇದಿಕೆ ರಾಜ್ಯ ಸಹ ಸಂಯೋಜಕ ಗು.ರುದ್ರಯ್ಯ, ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಹ ಸಂಚಾಲಕರೂ ಆದ ದಾವಣಗೆರೆಯ ಶ್ರೀ ಸೋಮೇಶ್ವರ ವಿದ್ಯಾಲಯದ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್, ಹಾವೇರಿ ಜಿಲ್ಲಾ ಬಿಜೆಪಿ ಉಸ್ತುವಾರಿ ಎಲ್.ಎನ್. ಕಲ್ಲೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ



ದಾವಣಗೆರೆ, ಫೆ.7- ಅಯೋಧ್ಯೆಯ ರಾಮಮಂದಿರಕ್ಕೆ ನಿಧಿ ಸಂಗ್ರಹಣಾ ಅಭಿಯಾನವನ್ನು ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ 38ನೇ ವಾರ್ಡಿನ ಹಿರಿಯ ನಾಗರಿಕರಾದ ಹೆಚ್.ಸಿ. ಶ್ರೀಕಂಠಣ್ಣ ಕುಟುಂಬದವರು ರಾಮಮಂದಿರ ನಿರ್ಮಾಣಕ್ಕೆ ನಿಧಿ ಸಮರ್ಪಿಸಿದರು. ಬಿಜೆಪಿ ಮುಖಂಡ ಶಿವಕುಮಾರ್ ಮಳಲ್ಕೆರೆ, ಬಿ.ಜಿ. ನಾಗರಾಜ್, ಕೆ.ಬಿ. ಮೋಹನ್ ರಾವ್, ಪ್ರಸಾದ್, ಸಿದ್ದಲಿಂಗಪ್ಪ, ಬಸವರಾಜಯ್ಯ, ಪ್ರಶಾಂತ್, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಿಂದ ಬೀದರ್, ಕಲಬುರ್ಗಿ, ವಿಜಯಪುರಕ್ಕೆ ದುರ್ಗಾಂಬಾ ಬಸ್

ದಾವಣಗೆರೆ,ಫೆ.7- ಶ್ರೀ ಮಹಾದೇವ ಮೋಟಾರ್ಸ್ ನ ಶ್ರೀ ದುರ್ಗಾಂಬಾ ಟ್ರಾವೆಲ್ಸ್ ನಿಂದ ಸಾರ್ವಜನಿಕರಿಗೆ ನಗರದಿಂದ ಬೀದರ್, ಕಲಬುರ್ಗಿ, ವಿಜಯಪುರಕ್ಕೆ ಬಸ್ಸಿನ ಸೌಲಭ್ಯ ಮಾಡಲಾಗಿದೆ ಎಂದು ಸಂಸ್ಥೆಯ ಉಮೇಶ್ ರಾವ್ ಸಾಳಂಕಿ (94484-15595) ತಿಳಿಸಿದ್ದಾರೆ.

ನಗರದಿಂದ ಪ್ರತಿದಿನ ಸಂಜೆ 6.30ಕ್ಕೆ ಬೀದರ್ ಮತ್ತು ಪ್ರತಿದಿನ ರಾತ್ರಿ 9.15ಕ್ಕೆ ಕಲಬುರ್ಗಿ (ಗುಲ್ಬರ್ಗಾ)ಗೆ ದುರ್ಗಾಂಬಾ ಬಸ್ ಹೊರಡಲಿದೆ. ಹರಿಹರ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕಂಪ್ಲಿ, ಗಂಗಾವತಿ, ಮಸ್ಕಿ, ಸಿಂಧನೂರು, ಲಿಂಗಸೂರು, ಶಹಪುರ, ಸುರಪುರ, ಜೇವರ್ಗಿ, ಹುಮ್ನಾಬಾದ್ ಮಾರ್ಗವಾಗಿ ಈ ಬಸ್ ಬೀದರ್ ಮತ್ತು ಕಲಬುರ್ಗಿ ತಲುಪಲಿದೆ.

ಪ್ರತಿದಿನ ರಾತ್ರಿ 10.45ಕ್ಕೆ ವಿಜಯಪುರಕ್ಕೆ ಹೊರಡುವ ಬಸ್ ಶಿವಮೊಗ್ಗ, ಹರಿಹರ, ಹರಪನಹಳ್ಳಿ, ಹೊಸಪೇಟೆ, ಕುಷ್ಠಗಿ, ಇಳಕಲ್, ಹುನಗುಂದ, ಆಲಮಟ್ಟಿ, ನಿಡಗುಂದಿ ಮಾರ್ಗವಾಗಿ ವಿಜಯಪುರ ತಲುಪಲಿದೆ.

## ಎಸ್.ಎಸ್.ಆಸ್ಪತ್ರೆ: ಇಂದಿನಿಂದ ಹಲವು ಸೇವೆಗಳು ಲಭ್ಯ

ದಾವಣಗೆರೆ,ಫೆ.7- ನಗರದ ಕೆ.ಆರ್. ರಸ್ತೆಯಲ್ಲಿರುವ ಬಾಪೂಜಿ ವಿದ್ಯಾಸಂಸ್ಥೆಯ ಎಸ್.ಎಸ್. ಸಾರ್ವಜನಿಕ ಆಸ್ಪತ್ರೆಯಲ್ಲಿ ಹೊರ ರೋಗಿ ವಿಭಾಗಗಳಾದ ಮೆಡಿಸಿನ್, ಪ್ರಸೂತಿ ವಿಭಾಗ, ಚರ್ಮ ರೋಗ, ಮಕ್ಕಳ ವಿಭಾಗ ಮತ್ತು ಡಯಾಸಿಸ್ ವಿಭಾಗಗಳನ್ನು ಪ್ರಾರಂಭಿಸಲಾಗಿದೆ.

ನಾಳೆ ದಿನಾಂಕ 8ರ ಸೋಮವಾರ ದಿಂದ ಈ ಎಲ್ಲಾ ವಿಭಾಗಗಳು ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದ್ದು, ನಾಗರಿಕರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ಕೋರಿದ್ದಾರೆ.

# ಬುದ್ಧಿ ಪ್ರಳಯದಿಂದಾಗುವ ಅನಾಹುತ ವರ್ಣನಾತೀತ



### ಶರಣ ಸಂಗಮದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ

ದಾವಣಗೆರೆ, ಫೆ.7- ಜಲ ಪ್ರಳಯ, ಭೂ ಪ್ರಳಯ, ಜ್ವಾಲಾಮುಖಿ ಮತ್ತು ಮಹಾ ಪ್ರವಾಹಗಳಿಂದಾಗುವ ಅನಾಹುತಕ್ಕಿಂತ ಬುದ್ಧಿ ಪ್ರಳಯದಿಂದಾಗುವ ಅನಾಹುತ ವರ್ಣನಾತೀತ ಎಂದು ವಿರಕ್ತ ಮಠದ ಚರಮೂರ್ತಿಗಳಾದ ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದರು.

ನಗರದ ಶಿವಯೋಗಾಶ್ರಮದ ಬಸವ ಕೇಂದ್ರದ ಆವರಣದಲ್ಲಿ ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ವಿರಕ್ತ ಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಮೊನ್ನೆ ಹಮ್ಮಿಕೊಳ್ಳಲಾಗಿದ್ದ ಶರಣ ಸಂಗಮ ಕಾರ್ಯಕ್ರಮದಲ್ಲಿ ಕೆರಳುವಿಕೆ ಮತ್ತು ಸಮತೋಲನ ವಿಷಯ ಕುರಿತು ಶ್ರೀಗಳು ಆಶೀರ್ವಚನ ನೀಡಿದರು.

ಪ್ರತಿಯೊಬ್ಬರು ಸಮತೋಲನದ ನಡೆ ಮತ್ತು ನುಡಿಯನ್ನು ರೂಢಿಸಿಕೊಂಡಾಗ ಬದುಕು ಪ್ರಬುದ್ಧವಾಗಲಿದೆ. ಶರೀರ, ಇಂದ್ರಿಯ ಮತ್ತು ಬುದ್ಧಿಯ ಸಮತೋಲನ ಸಾಧನೆಯು ವಿಶಿಷ್ಟವಾದ ಸಾಧನೆ. ಇಂತಹ ಸಾಧನೆ ಸಾಧ್ಯವಾದಾಗ ಮಾತು, ವರ್ತನೆ ಮತ್ತು ನಿರ್ಣಯಗಳಲ್ಲಿಯೂ ಸಮತೋಲನ ಕಾಣಬಹುದು. ಪ್ರಬುದ್ಧ ನಡೆ-ನುಡಿ ಇದ್ದವರೇ ಎಲ್ಲಾ ಕಾಲಕ್ಕೂ ಆದರ್ಶ. ಅವರೇ ಬುದ್ಧ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ದಾರ್ಶನಿಕರು. ದಾರ್ಶನಿಕರ ಸಮತೋಲನ ನಡೆ-ನುಡಿಯ ದಾರಿಯಲ್ಲಿ ಸಾಗೋಣ ಎಂದು ಹೇಳಿದರು.

ಮನಸ್ಸು ಕೆರಳಿಸುವ ಕೋಪಕ್ಕೆ ಬುದ್ಧಿ ನೀಡದೇ ಸಮಚಿತ್ತದಿಂದ ಇರಬೇಕು. ಇದಕ್ಕೆ ಶಿವಯೋಗ, ಧ್ಯಾನ ಮಾಡಿ ಸಮಾಧಾನಿಗಳಾಗಬೇಕು. ಕೆರಳಿಸಲೆಂದೇ ನಿಂದಕರು ನಿಂದಿಸಿದಾಗ ಕಿವಿಗೊಡಬಾರದು. ಬೆಳವಣಿಗೆಯ ಹಾದಿಯತ್ತ ಗಮನವಿಟ್ಟು ಸಮಾಧಾನಿಗಳಾಗಬೇಕೆಂದರು. ಪ್ರೇರಣೆ ತುಂಬಿದಾಗ ಸತ್ಕಾರ್ಯ ಗಳು ನಡೆದು ಸಮಾಜ, ದೇಶಕ್ಕೆ ಒಳಿತು ಕಾಣಬಹುದು. ಇದುವೇ ಬದುಕಿನ ಸಾರ್ಥಕತೆ. ಕೆಲ ಪಟ್ಟಭದ್ರ ಹಿತಾಸಕ್ತಿಗಳು ಮುಗ್ಧ ಜನರನ್ನು ಪ್ರಚೋದಿಸಿ ಸಮಾಜದ ಶಾಂತಿ ಕದಡುವಂತಹುದು ಹೆಚ್ಚಾಗಿರುವುದು ದೊಡ್ಡ ದುರಂತ ಎಂದು ವಿಷಾದಿಸಿದರು.

ಪ್ರೇರಣೆ ಬದುಕನ್ನು ಅರಳಿಸಿದರೆ, ಪ್ರಚೋದನೆ ಕೆರಳಿಸಲಿದೆ. ಪ್ರಚೋದನೆಗಳಿಗೆ ಮುಗ್ಧರು ಒಳಗಾಗದೇ ಸ್ವಂತವಾಗಿ ಆಲೋಚಿಸುವ ಶಕ್ತಿ ಬೆಳೆಸಿಕೊಳ್ಳಬೇಕೆಂದರು.

ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ಹೆಚ್. ದೊಡ್ಡಗೌಡರ್ ಉಪನ್ಯಾಸ ನೀಡಿದರು. ಇದೇ ವೇಳೆ ಲಿಂಗದೇವಿ ಗುಬ್ಬಿ ಅವರು ಚಿತ್ರದುರ್ಗ ಬಸವೇಶ್ವರ ಆಸ್ಪತ್ರೆಗೆ ದೇಹದಾನದ ವಾಗ್ದಾನ ಮಾಡಿದರು.

ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಅಹಿಂದ ಪ್ರಜಾಶಕ್ತಿಯ ರಾಜ್ಯಾಧ್ಯಕ್ಷ ಜಿ.ಎಂ. ಗೋವಿಂದರಾಜು ಸೇರಿದಂತೆ ಇತರರು ಇದ್ದರು. ರುಕ್ಮಾಬಾಯಿ ಅವರಿಂದ ವಚನ ಗಾಯನ ನಡೆಯಿತು. ವಿರಕ್ತಮಠದ ಬಸವಕಲಾ ಲೋಕದಿಂದ ವಚನ ಸಂಗೀತ ಹಾಡಲಾಯಿತು. ವಿರಕ್ತ ಮಠದ ಶಿವಬಸಯ್ಯ ಭಕ್ತಿ ಗೀತೆ ಹಾಡಿದರು. ಫಾರೂಕ್ ನಿರೂಪಿಸಿದರು. ರೋಷನ್ ಸ್ವಾಗತಿಸಿದರು.

## ರಾಜನಹಳ್ಳಿ ವಾಲ್ಮೀಕಿ ಜಾತ್ರೆಯಲ್ಲಿ ಎಸ್ಸಿ ನೌಕರರ ಸಮಾವೇಶ

ದಾವಣಗೆರೆ, ಫೆ.7- ನಾಳೆ ದಿನಾಂಕ 8 ಮತ್ತು 9 ರಂದು ರಾಜನಹಳ್ಳಿಯಲ್ಲಿ ನಡೆಯಲಿರುವ ವಾಲ್ಮೀಕಿ ಜಾತ್ರೆಯಲ್ಲಿ ನಾಳೆ ದಿನಾಂಕ 8 ರಂದು ಅಪರಾಹ್ನ 3ಕ್ಕೆ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ನೌಕರರ ಸಮಾವೇಶ ಹಮ್ಮಿಕೊಂಡಿರುವುದಾಗಿ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಹಾಗೂ ಜಿಲ್ಲಾಧ್ಯಕ್ಷ ಬಿ. ಶ್ರೀನಿವಾಸ ನಾಯಕ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೆಪಿಎಸ್‌ಸಿ ಸದಸ್ಯ ಡಾ. ರಂಗರಾಜ ವನದುರ್ಗ ಅಧ್ಯಕ್ಷತೆ ವಹಿಸುವರು. 'ಎಸ್ಪಿ' ರವಿ ಡಿ. ಚನ್ನಣ್ಣನವರ್ ಸಮಾವೇಶ ಉದ್ಘಾಟಿಸಲಿದ್ದಾರೆ. ಪ.ಜಾ., ಪ.ಪಂ. ನೌಕರರ ಸಮನ್ವಯ ಸಮಿತಿ ರಾಜ್ಯಾಧ್ಯಕ್ಷ ಡಿ. ಶಿವಶಂಕರ್ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಕರ್ನಾಟಕ ರಾಜ್ಯ ಪ.ಪಂ. ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎ. ರಾಜಶೇಖರ್ ಮತ್ತಿತರರು ಭಾಗವಹಿಸಲಿದ್ದಾರೆ.

ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರ ಮಹತ್ವಾಕಾಂಕ್ಷೆಯ, ಬಡ ಮಕ್ಕಳಿಗೆ ವಿದ್ಯಾದಾನ ನೀಡುವ 'ಏಕಲವ್ಯ ವಿದ್ಯಾನಿಧಿ' ಯೋಜನೆ ಕುರಿತು ನಿರ್ಣಯ ಕೈಗೊಳ್ಳಲಾಗುವುದು.

**ಸಿ.ಎಂ. ಗೆ ಮನವಿ :** ಪ್ರತ್ಯೇಕ ಸಚಿವಾಲಯ, ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಶೇ. 7.5 ಮೀಸಲಾತಿ ನೀಡಬೇಕು. ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಬಡ್ತಿ ಮೀಸಲಾತಿ ಸಮರ್ಪಕವಾಗಿ ಅನುಷ್ಠಾನಗೊಳಿಸ ಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಮನವಿಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಲ್ಲಿಸುವುದಾಗಿ ತಿಪ್ಪೇಸ್ವಾಮಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಜಿ.ಎಂ. ನಾಯಕ್, ಡಾ. ನಂದಕುಮಾರ್, ಕೆ. ನಾಗರಾಜ್, ಆರ್.ಎಚ್. ಗೋವಿಂದಪ್ಪ, ಜಿ. ಅಣ್ಣಪ್ಪ, ಗುಂಡಪ್ಪ, ಎಸ್.ಕೆ. ಸ್ವಾಮಿ, ಯೋಗೀಶ್ ಇದ್ದರು.

# ಸಂಶೋಧನೆಯು ಹರಿಯುವ ನದಿಯಾಗಿರಲಿ



### 'ಅಧಿಷ್ಠಾನ' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ. ನಾ. ಕೊಟ್ರೇಶ್ ಉತ್ತಂಗಿ

ದಾವಣಗೆರೆ, ಫೆ.7- ಸಂಶೋಧನೆ ನಿಂತ ನೀರಾಗದೇ ನಿರಂತರವಾಗಿ ಹರಿಯುವ ನದಿಯಾಗಬೇಕು ಎಂದು ಸಾಹಿತಿ ಡಾ. ನಾ. ಕೊಟ್ರೇಶ್ ಉತ್ತಂಗಿ ಆಶಯ ವ್ಯಕ್ತಪಡಿಸಿದರು.

ಅವರು, ಇಂದು ನಗರದ ರೋಟರಿ ಬಾಲಭವನದಲ್ಲಿ ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ತಾಲ್ಲೂಕು ಘಟಕ, ಕನ್ನಡ ಜಾಗೃತಿ ಕೇಂದ್ರ, ಸ್ಫೂರ್ತಿ ಪ್ರಕಾಶನ ತೆಲಗಿ, ಭಾವಸಿರಿ ಪ್ರಕಾಶನ ಅಣಬೇರು ಇವುಗಳ ಸಂಯುಕ್ತಾಶ್ರಯದಲ್ಲಿ ನಡೆದ ಸಾಹಿತಿ ಎಸ್. ಮಲ್ಲಿಕಾರ್ಜುನ ಪ್ಪ ಅವರ 'ಅಧಿಷ್ಠಾನ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಅಧಿಷ್ಠಾನ ಸಂಶೋಧನಾ ಕೃತಿಯಾಗಿದ್ದು, ಮಹಾಲಿಂಗ ರಂಗರ ಹಲವು ಮಗ್ಗಲುಗಳನ್ನು ಹುಡುಕಿ ಸಂಶೋಧನೆ ಕೈಗೊಂಡು, ಕವಿ ಮಹಾಲಿಂಗ ರಂಗರು ಅವಧೂತರಲ್ಲ ಬದಲಿಗೆ ಶಿಷ್ಟಂದಿರು ಅವಧೂತರು ಎಂಬುದನ್ನು ತಿಳಿಸಿ, ಮಹಾಲಿಂಗ ರಂಗರ ಬಗ್ಗೆ ಇರುವ ಗೊಂದಲ ನಿವಾರಿಸಿದ್ದಾರೆ. ತಮ್ಮ ಬಗ್ಗೆ ನೈಜ ಕಾಳಜಿ ಇರದಿದ್ದ ಅವಧೂತರು ಸಮಾಜದ ಸ್ವಾಸ್ಥ್ಯಕ್ಕಾಗಿ ಹೆಚ್ಚು ಮನ್ನಣೆ ನೀಡಿದ್ದರು. ಇಂತಹ ಅವಧೂತರನ್ನು ತಯಾರಿಸಿದ ಕೀರ್ತಿ ಮಹಾಲಿಂಗ ರಂಗ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕೃತಿ ಲೋಕಾರ್ಪಣೆಗೊಳಿಸಿದ ಸಾಹಿತಿ ಹೆಚ್. ಮಲ್ಲಿಕಾರ್ಜುನ ಮಾತನಾಡಿ, ಪ್ರಸ್ತುತ ಸಾಹಿತ್ಯ ಕೃಷಿ ಮಾಡುವ ಬಗ್ಗೆ ಒಲವು ಕುಸಿದಿದ್ದು, ಪುಸ್ತಕ ಬರೆದರೂ ಆರ್ಥಿಕ ಸಮಸ್ಯೆ ಕಾರಣಕ್ಕೆ ಪ್ರಕಟಿಸಲು ಸಾಧ್ಯವಾಗುತ್ತಿಲ್ಲ.

ಸಾಲ ಮಾಡಿ ಪ್ರಕಟಿಸಿದರೂ ಪುಸ್ತಕ ಖರೀದಿಸಿ ಓದುವವರ ಸಂಖ್ಯೆ ವಿರಳವಾಗಿದೆ. ಆದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು, ಪುಸ್ತಕ ಪ್ರಾಧಿಕಾರದಂತಹ ಸಂಘ-ಸಂಸ್ಥೆಗಳು ಪುಸ್ತಕ ಪ್ರಕಟಿಸುವ ಜವಾಬ್ದಾರಿ ಹೊಂದಬೇಕೆಂದರು.

ಕೃತಿಯ ಕರ್ತೃ ಎಸ್. ಮಲ್ಲಿಕಾರ್ಜುನಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಜಿ.ಹೆಚ್. ರಾಜಶೇಖರ ಗುಂಡಗಟ್ಟಿ, ನಿವೃತ್ತ ಉಪನ್ಯಾಸಕ ಕೆ. ಸಿದ್ದಪ್ಪ, ನಿವೃತ್ತ ಶಿಕ್ಷಕ ಜಿ.ಎಸ್. ಶರಣಯ್ಯ, ನೀಲಗುಂದ ಜಯಮ್ಮ, ತೆಲಗಿ ವೀರಭದ್ರಪ್ಪ, ಸ್ಫೂರ್ತಿ ಪ್ರಕಾಶನ ತೆಲಗಿ ಅಧ್ಯಕ್ಷ ಎಂ. ಬಸವರಾಜ್, ಅಣಬೇರು ತಾರೇಶ್, ಮಹಾಂತೇಶ್ ನಿಟ್ಟೂರು, ಸುನೀತಾ ಪ್ರಕಾಶ್ ಸೇರಿದಂತೆ ಇತರರು ಇದ್ದರು. ಎಸ್. ಉಮಾದೇವಿ ಪ್ರಾರ್ಥಿಸಿದರು. ಕೆ.ಆರ್. ಉಮೇಶ್ ಸ್ವಾಗತಿಸಿದರು. ಬಿ.ಎಲ್. ಗಂಗಾಧರ ನಿಟ್ಟೂರು ನಿರೂಪಿಸಿದರು. ಶೋಭಾ ಮಂಜುನಾಥ್ ವಂದಿಸಿದರು.

## ಕಸಾಪ ಚುನಾವಣೆ ಘೋಷಣೆ ; ಸಮ್ಮೇಳನ ಸೂಕ್ತವಲ್ಲ : ಶಿವು ಕುರ್ಕಿ



ದಾವಣಗೆರೆ ಫೆ.7 - ಕನ್ನಡ ಸಾಹಿತ್ಯ ಪರಿಷತ್ತಿಗೆ ಈಗಾಗಲೇ ರಾಜ್ಯ ಚುನಾವಣಾ ಆಯೋಗವು ಬರುವ ಮೇ 9ರಂದು ಚುನಾವಣೆ ನಡೆಸಲು ವೇಳಾಪಟ್ಟಿ ಪ್ರಕಟಿಸಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದು ಸೂಕ್ತವಲ್ಲ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಆರ್. ಶಿವಕುಮಾರಸ್ವಾಮಿ ಕುರ್ಕಿ ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್‌ಗೆ ಮೇ 9 ರಂದು ಚುನಾವಣೆ ನಡೆಯುವುದು ಖಚಿತವಾದರೂ ಏಪ್ರಿಲ್‌ನಲ್ಲಿ ಹಾವೇರಿ ಸಾಹಿತ್ಯ ಸಮ್ಮೇಳನ ಮತ್ತು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾರ್ಚ್ ಮಾಹೆಯಲ್ಲಿ ನಡೆಸುವುದಾಗಿ ಪರಿಷತ್ ಅಧ್ಯಕ್ಷರುಗಳು ಘೋಷಿಸಿರುವುದು ಅಕ್ಷಮ್ಯ ಅಪರಾಧ ಎಂದು ಕುರ್ಕಿ ಹೇಳಿದ್ದಾರೆ.

ದಾವಣಗೆರೆ ಜಿಲ್ಲಾ ಕಸಾಪ ಹಾಲಿ ಅಧ್ಯಕ್ಷರು ಮತ್ತೊಂದು ಅವಧಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗಿರುವ ಕಾರಣ, ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸುವುದು ಮತದಾರರ ಮೇಲೆ ಪ್ರಭಾವ ಬೀರಿದಂತಾಗುತ್ತದೆ. ಕಾರಣ ಚುನಾವಣಾಧಿಕಾರಿಗಳು ಈ ಕೂಡಲೇ ಚುನಾವಣಾ ನೀತಿ ಸಂಹಿತೆ ಜಾರಿಗೊಳಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಸಾಪ ಸಮಸ್ತ ಆಜೀವ ಸದಸ್ಯರು ಈ ಬಗ್ಗೆ ತಮ್ಮ ವಿರೋಧವನ್ನು ಪತ್ರ ಮೂಲಕ ಕೇಂದ್ರ ಕಸಾಪ ಕಛೇರಿಗೆ ಕಳುಹಿಸಬೇಕು ಎಂದು ಶಿವಕುಮಾರಸ್ವಾಮಿ ಕುರ್ಕಿ ಕೇಳಿಕೊಂಡಿದ್ದಾರೆ.

# ಶ್ರೀಗಂಧ ಮರ ಕಳ್ಳರಿಬ್ಬರ ಬಂಧನ



ದಾವಣಗೆರೆ, ಫೆ.7- ಶ್ರೀಗಂಧದ ಮರಗಳನ್ನು ಕಡಿದು ತುಂಡು ಮಾಡಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ನಗರದ ಗ್ರಾಮಾಂತರ ಪೊಲೀಸರು 19,450 ಕೆ.ಜಿ.ಯಷ್ಟು ಶ್ರೀಗಂಧದ ಮರದ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಲೋಕಿಕೆರೆ ಯಲ್ಲಮ್ಮ ನಗರದ ಗಂಗಾಧರಪ್ಪ ಮತ್ತು ಈತನ ಸಹಚರ ಶಿವಮೊಗ್ಗದ ಚೆಲುವ ಬಂಧಿತರು. ಇನ್ನುಳಿದ ಆರೋಪಿಗಳು ತಲೆಮರೆಸಿಕೊಂಡಿದ್ದು, ಪತ್ತೆಗೆ ತಂಡ ರಚಿಸಲಾಗಿದೆ.

ಬಂಧಿತರು ಕಳ್ಳತನದಿಂದ ಶ್ರೀಗಂಧದ ಮರಗಳನ್ನು ಕಡಿದುಕೊಂಡು ಅದನ್ನು ತುಂಡು ಮಾಡಿ ತಮ್ಮ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಕೊಂಡಿದ್ದರು. ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ಮಾರ್ಗದರ್ಶನದಲ್ಲಿ ಸಿಪಿಐ ಬಿ. ಮಂಜುನಾಥ, ಹದಡಿ ಠಾಣೆ ಪಿಎಸ್ ಐ ಪಿ. ಪ್ರಸಾದ್ ಮತ್ತು ಸಿಬ್ಬಂದಿಗಳಾದ ಮಂಜುನಾಥ, ವಿಶ್ವನಾಥ, ಶಿವಕುಮಾರ್, ವೀರಭದ್ರಪ್ಪ, ಅಣ್ಣಪ್ಪ, ಸಿದ್ದೇಶ್, ಅಶೋಕ್ ಹಾಗೂ ಅರಣ್ಯ ಇಲಾಖೆಯ ಅಧಿಕಾರಿ ರಾಮಚಂದ್ರಪ್ಪ ಅವರೊಂದಿಗೆ ಲೋಕಿಕೆರೆ ಯಲ್ಲಮ್ಮ ನಗರದ ರಾಜಪ್ಪನ ಮನೆ ಮೇಲೆ ಇಂದು ದಾಳಿ ನಡೆಸಿದ್ದಾರೆ.

# ಕುರಿಗಳ್ಳರ ಬಂಧನ: 20 ಕುರಿಗಳ ವಶ



ದಾವಣಗೆರೆ, ಫೆ.7- ಮೂವರು ಕುರಿಗಳ್ಳರನ್ನು ಬಂಧಿಸಿರುವ ಹದಡಿ ಠಾಣೆ ಪೊಲೀಸರು, 20 ಕುರಿಗಳನ್ನು ವಶಪಡಿಸಿಕೊಂಡಿದ್ದಾರೆ.

ಶಿವಮೊಗ್ಗದ ಟಿಪ್ಪು ನಗರದ ಬಟ್ಟೆ ವ್ಯಾಪಾರಿಗಳೆನ್ನಲಾದ ಸೈಯದ್ ದಸ್ತಗೀರ್, ಅಮಾನುವುಲ್ಲಾ ಖಾನ್, ಹೊನ್ನಾಳಿ ತಾಲ್ಲೂಕಿನ ಕೂಲಂಬಿಯ ಹಮಾಲಿ ಮಹಮದ್ ಅಲ್ತಾಫ್ ಬಂಧಿತರು. ಬಲ್ಲೂರು ಗ್ರಾಮದ ಬಕ್ಕೇಶ್ವರಯ್ಯ ಎಂಬುವರ ಗೋದಾಮಿನಲ್ಲಿ ಕಳೆದ ವಾರ 20 ಕುರಿಗಳು ಕಳ್ಳತನವಾಗಿದ್ದವು. ಈ ಸಂಬಂಧ ಹದಡಿ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿತ್ತು.

ಎಸ್ಪಿ ಹನುಮಂತ ರಾಯ, ಎಎಸ್ಪಿ ಎಂ. ರಾಜೀವ್ ಹಾಗೂ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ನಿರ್ದೇಶನದಂತೆ ಗ್ರಾಮಾಂ ತರ ಸಿಪಿಐ ಬಿ. ಮಂಜುನಾಥ ಮಾರ್ಗದರ್ಶನದಲ್ಲಿ ಹದಡಿ ಠಾಣೆಯ ಪಿಎಸ್ ಐ ಪಿ. ಪ್ರಸಾದ್ ನೇತೃತ್ವದಲ್ಲಿ ಸಿಬ್ಬಂ ದಿಗಳಾದ ಕರಿಬಸಪ್ಪ, ಶಿವಕುಮಾರ್, ಮಂಜುನಾಥ, ವಿಶ್ವನಾಥ, ವೀರಭದ್ರಪ್ಪ, ಅಣ್ಣಪ್ಪ, ಸಿದ್ದೇಶ್, ಅಶೋಕ್, ಜಗದೀಶ್ ಒಳಗೊಂಡ ತಂಡವು ಆರೋಪಿಗಳನ್ನು ಬಂಧಿಸಿದೆ.

## ಕಾರ್ಮಿಕ ಇಲಾಖೆಗೆ 15 ಸಾವಿರ ಕೋಟಿ ಮೀಸಲಿಡಲು ಒತ್ತಾಯ

ದಾವಣಗೆರೆ, ಫೆ.7- ಬರುವ ಬಜೆಟ್ ಅಧಿವೇಶನದಲ್ಲಿ ಕಾರ್ಮಿಕ ಇಲಾಖೆಗೆ 15 ಸಾವಿರ ಕೋಟಿಗೂ ಹೆಚ್ಚು ಅನುದಾನ ಮೀಸಲಿಡಬೇಕು ಎಂದು ಕಾರ್ಮಿಕ ಹಕ್ಕುಗಳ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಪಾವಗಡ ಶ್ರೀರಾಮ್ ಅವರು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಏಜೆಂಟ್ ಪದ್ಧತಿ ತೆಗೆದು ಹಾಕಬೇಕು. ಅವರನ್ನು ನೇರ ನೇಮಕಾತಿ ಮಾಡಬೇಕು. ಪೌರ ಕಾರ್ಮಿಕರನ್ನು ಖಾಯಂಗೊಳಿಸಬೇಕು. ತಮಟೆ ಕಲಾವಿದರಿಗೆ ಆಂಧ್ರ ಮತ್ತು ತೆಲಂಗಾಣ ಮಾದರಿಯಲ್ಲಿ ಮೂರು ಸಾವಿರ ಮಾಸಾಶನ ನೀಡಬೇಕು. ಕಳೆದ 50 ವರ್ಷಗಳಿಂದ ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರಿಗೆ 20 ಸಾವಿರ ವೇತನ ನೀಡಬೇಕು. ರೈತರಿಗೆ ಮತ್ತು ಸರ್ಕಾರಕ್ಕೆ ಕೊಂಡಿಯಾಗಿ ಕೆಲಸ ಮಾಡುತ್ತಿರುವ ರೈತ ಅನುವುಗಾರರನ್ನು ಮರು ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಗುರು ಶಾಮಯ್ಯ, ಬಿ.ಜಿ. ಸಾಗರ್, ಹನುಮಂತಪ್ಪ ಬಹದ್ದೂರ್, ಮರಿಯಣ್ಣ, ಶಿವಮೂರ್ತಿ, ಶರಣಪ್ಪ ಇದ್ದರು.




## ಹಳೇಬಾತಿ ಗ್ರಾ.ಪಂ ಅಧ್ಯಕ್ಷರಾಗಿ ಸಿದ್ದೇಶ್, ಉಪಾಧ್ಯಕ್ಷರಾಗಿ ಗದಿಗೆಮ್ಮ




ದಾವಣಗೆರೆ, ಫೆ.7 - ಇಲ್ಲಿಗೆ ಸಮೀಪದ ಹಳೇಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಎಸ್.ಆರ್. ಸಿದ್ದೇಶ್ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಗದಿಗೆಮ್ಮ ಬಸವರಾಜಪ್ಪ ಅವರು ಶನಿವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಪುಟ್ಟಸ್ವಾಮಿ ಚುನಾವಣಾಧಿಕಾರಿಯಾಗಿದ್ದರು.

## ಎನ್.ಎ.ಮುರುಗೇಶ್ ಬಿಜೆಪಿ ಸೇರ್ಪಡೆ



ದಾವಣಗೆರೆ, ಫೆ. 7 - ದಾವಣಗೆರೆ-ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ನಗರದ ಪ್ರವಾಸಿ ಮಂದಿರದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶಿವರಾಜ್ ಪಾಟೀಲ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೆ.ಎಸ್. ವೇಣುಗೋಪಾಲ ರೆಡ್ಡಿ, ಉಪಾಧ್ಯಕ್ಷ ಬಿ. ಶೇಖರಪ್ಪ, ನಿರ್ದೇಶಕ ಜಗದೀಶಪ್ಪ ಬಣಕಾರ್ ಮತ್ತಿತರರು ಉಪಸ್ಥಿತರಿದ್ದರು.

## ಮರಾಠ ಸಮಾಜದ ಗ್ರಾ.ಪಂ. ಸದಸ್ಯರಿಗೆ ಅಭಿನಂದನೆ



ದಾವಣಗೆರೆ, ಫೆ.7- ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತಿನ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಚುನಾಯಿತರಾದ ಮರಾಠ ಸಮುದಾಯದ ನೂತನ ಸದಸ್ಯರುಗಳನ್ನು ಸನ್ಮಾನಿಸಿ ಗೌರವಿಸುವ ಮುಖೇನ ಅಭಿನಂದನೆ ಸಲ್ಲಿಸಲಾಯಿತು.

ನಗರದ ದೇವರಾಜ ಅರಸು ಬಡಾವಣೆ ಬಿ ಬ್ಲಾಕ್ ನ ಅಂಬಾಭವಾನಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಗ್ರಾಮ ಪಂಚಾಯಿತಿಗಳ ಮರಾಠ ಸಮಾಜದ ನೂತನ ಸದಸ್ಯರನ್ನು ಸನ್ಮಾನಿಸಲಾಯಿತು.

ಬೆಂಗಳೂರಿನ ಶ್ರೀ ಗೋಸಾಯಿ ಮಠ ಮಹಾಸಂಸ್ಥಾನದ ಭವಾನಿ ಪೀಠದ ಶ್ರೀ ಮಂಜುನಾಥ ಸ್ವಾಮೀಜಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪರಿಷತ್ ಜಿಲ್ಲಾಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ಗಡದೆ ಅಧ್ಯಕ್ಷತೆ ವಹಿಸಿದ್ದರು.

ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ. ಮಾಲತೇಶ್ ರಾವ್ ಜಾಧವ್, ಗೌರವಾಧ್ಯಕ್ಷ ಯಶವಂತರಾವ್ ಜಾಧವ್, ಪರಿಷತ್ ನ ಜಿಲ್ಲಾ ಮಹಿಳಾ ಅಧ್ಯಕ್ಷರಾದ ಶ್ರೀಮತಿ ನಳಿನ ನರೇಂದ್ರ ರಾವ್ ಪವಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚೇತನ ಶಿವಕುಮಾರ್, ಸಂಘಟನಾ ಕಾರ್ಯದರ್ಶಿ ಎನ್.ಎಸ್. ಕೃಷ್ಣರಾವ್ ಸಾವಂತ್, ರಾಘವೇಂದ್ರ, ಹನುಮಂತರಾವ್, ಪ್ರಶಾಂತ್ ಭೋಂಸ್ಲೆ, ಗಣೇಶ್ ಸುರ್ವೆ, ಸತೀಶ್ ಪವಾರ್, ಮೊಹರೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜಗಳೂರು : ನಾಡಿದ್ದು ಪ.ಪಂ.ಸಭೆ

ಜಗಳೂರು,ಫೆ.7- ಪಟ್ಟಣ ಪಂಚಾಯಿತಿಯ ಬಜೆಟ್ ಪೂರ್ವಭಾವಿ ಸಭೆಯು ದಿನಾಂಕ 10 ರಂದು ಬೆಳಿಗ್ಗೆ 11 ಕ್ಕೆ ನಡೆಯಲಿದೆ.

## ಹನಗವಾಡಿ ಗ್ರಾ.ಪಂ ಅಧ್ಯಕ್ಷರಾಗಿ ಸವಿತಾ, ರೇವಣಸಿದ್ದಪ್ಪ ಉಪಾಧ್ಯಕ್ಷ



ಮಲೇಬೆನ್ನೂರು, ಫೆ.7 - ಹನಗವಾಡಿ ಗ್ರಾ.ಪಂ ಅಧ್ಯಕ್ಷರಾಗಿ ಶ್ರೀಮತಿ ಸವಿತಾ ಮತ್ತು ಉಪಾಧ್ಯಕ್ಷರಾಗಿ ಎಸ್.ರೇವಣಸಿದ್ದಪ್ಪ ಅವರು ಶನಿವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಬಿಇಒ ಯು. ಬಸವರಾಜಪ್ಪ ಚುನಾವಣಾಧಿಕಾರಿಯಾಗಿದ್ದರು. ಪಿಡಿಒ ರೇಣುಕಬಾಯಿ ಹಾಜರಿದ್ದರು.
















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte